Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 24-11-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 24-11-2020 |
| --- | --- |
| Page No | 3 |


### ಬಿಬಿಎಂಪಿ: ಬೆಳ್ಳಹಳ್ಳಿ ಕ್ವಾರಿಯಲ್ಲಿ ವೈಜ್ಞಾನಿಕ ನಿರ್ವಹಣೆ ಕಾಮಗಾರಿ ಕುರಿತ ಮಾಹಿತಿಗಳು

# ಐಎಫ್‌ಎಂಎಸ್‌ನಲ್ಲಿ ವಿವರ ಕಣ್ಮರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳ್ಳಹಳ್ಳಿ ಕ್ವಾರಿಯಲ್ಲಿ 2019ರಲ್ಲಿ ನಡೆಸಿದ್ದ ವೈಜ್ಞಾನಿಕ ನಿರ್ವಹಣೆಗಳಿಗೆ ಕಸ ನಿರ್ವಹಣೆ ಕಾಮಗಾರಿ ಕುರಿತ ವಿವರಗಳು ಬಿಬಿಎಂಪಿಯ ಐಎಫ್‌ಎಂಎಸ್ ತಂತ್ರಾಂಶದಲ್ಲಿ ದಿಢೀರ್ ಕಣ್ಮರೆಯಾಗಿದ್ದು, ಅನುಮಾನಗಳಿಗೆ ಕಾರಣವಾಗಿದೆ.

ಮಿಶ್ರಕಸದ ಭೂಭರ್ತಿ ಕೇಂದ್ರಗಳ ವೈಜ್ಞಾನಿಕ ನಿರ್ವಹಣೆಯ ತುರ್ತು ಉದ್ದೇಶಕ್ಕಾಗಿ ₹ 100.94 ಕೋಟಿ ವೆಚ್ಚದ ಕಾಮಗಾರಿಯನ್ನು ಟೆಂಡರ್ ಕರೆಯದೆ ಕೆಆರ್‌ಐಡಿಎಲ್ ಮೂಲಕ ನಡೆಸಲು ನಗರಾಭಿವೃದ್ಧಿ ಇಲಾಖೆ ಅನುಮತಿ ನೀಡಿತ್ತು. ಬಳಿಕ ಹೆಚ್ಚುವರಿಯಾಗಿ ₹ 15 ಕೋಟಿ ವೆಚ್ಚದ ಕಾಮಗಾರಿಗೂ ಕೆಟಿಟಿಪಿ ಕಾಯ್ದೆಯ 4ಜಿ ಕಲಂ ಅಡಿ ವಿನಾಯಿತಿ ಕೊಟ್ಟಿತ್ತು. ಆದರೆ, ಪಾಲಿಕೆಯು ಮೇಯರ್ ಅನುದಾನ ಬಳಸಿ ₹ 53 ಕೋಟಿ ಅಂದಾಜು ವೆಚ್ಚದ ಕಾಮಗಾರಿಯನ್ನೂ ಟೆಂಡರ್ ಕರೆಯದೆಯೇ ನಡೆಸಿತ್ತು.

**ಬಿಬಿಎಂಪಿ ಸುದ್ದಿ**

ಕೆಟಿಪಿಪಿ ಕಾಯ್ದೆಯ 4ಜಿ ಕಲಂ ಅಡಿ ವಿನಾಯಿತಿ ಪಡೆದ ಮೊತ್ತಕ್ಕಿಂತ ಬಿಬಿಎಂಪಿ ₹ 50.53 ಕೋಟಿ ಹೆಚ್ಚು ಮೊತ್ತದ ಕಾಮಗಾರಿ ನಡೆಸಿ, ಹಣವನ್ನೂ ಪಾವತಿಸಿತ್ತು.

ನಗರಾಭಿವೃದ್ಧಿ ಇಲಾಖೆಯ ಆಡಳಿತಾತ್ಮಕ ಅನುಮೋದನೆ ಇಲ್ಲದೆಯೇ ಕೆಆರ್‌ಐಡಿಎಲ್ ಮೂಲಕ ಈ ಕಾಮಗಾರಿ ನಡೆಸಲಾಗಿತ್ತು.

ಬೆಳ್ಳಹಳ್ಳಿ ಕ್ವಾರಿಯ 2019ರ ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳುಗಳ ವೈಜ್ಞಾನಿಕ ನಿರ್ವಹಣೆಗಳಿಗೆ ಕಸ ನಿರ್ವಹಣೆಯ ಲೆಕ್ಕ ಶೀರ್ಷಿಕೆಯ (ಪಿ–1521) ಬದಲು ಮೇಯರ್ ಆದೇಶದಡಿ ನಡೆಸುವ ಕಾಮಗಾರಿಗಳ ಲೆಕ್ಕಶೀರ್ಷಿಕೆಯಡಿ (ಪಿ–0190) ಜಾಬ್ ಕೋಡ್ ನೀಡಲಾಗಿತ್ತು. ಯಾವುದೇ ಕಾಮಗಾರಿ ಆರಂಭವಾಗುವುದಕ್ಕೆ ಮುನ್ನವೇ ಜಾಬ್‌ಕೋಡ್ ನೀಡುವುದು ವಾಡಿಕೆ. ಆದರೆ, ಈ ಪ್ರಕರಣದಲ್ಲಿ 2019ರ ಆಗಸ್ಟ್ ತಿಂಗಳ ಕಾಮಗಾರಿಯ ಜಾಬ್‌ಕೋಡ್ ಅನ್ನು ಸೆಪ್ಟೆಂಬರ್ 17ರಂದು ನೀಡಲಾಗಿತ್ತು! ಆಗಸ್ಟ್ ತಿಂಗಳ ಕಾಮಗಾರಿಗೆ ಕಸ ನಿರ್ವಹಣೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅಕ್ಟೋಬರ್ 3ರಂದು ಆಡಳಿತಾತ್ಮಕ ಅನುಮೋದನೆ ನೀಡಿದ್ದಾರೆ. ಕೆಆರ್‌ಐಡಿಎಲ್‌ಗೆ ವಹಿಸಿದ ಈ ಕಾಮಗಾರಿಗೂ ನಗರಾಭಿವೃದ್ಧಿ ಇಲಾಖೆಯ ಅನುಮೋದನೆ ಹಾಗೂ 4ಜಿ ವಿನಾಯಿತಿ ಪಡೆದಿರಲಿಲ್ಲ.

ಆಗಸ್ಟ್ ತಿಂಗಳ ನಿರ್ವಹಣೆ ಕಾಮಗಾರಿಗಳಿಗೆ ಯಲಹಂಕ ವಲಯದ ಮುಖ್ಯ ಎಂಜಿನಿಯರ್ ತಾಂತ್ರಿಕ ಅನುಮೋದನೆ ನೀಡಿದ್ದು, 2019ರ ನ.8ರಂದು. ಆದರೆ, ನ.11ರಂದು ಕೆಆರ್‌ಐಡಿಎಲ್‌ಗೆ ಕಾರ್ಯಾದೇಶ ನೀಡಲಾಗಿತ್ತು. ನ.11ರಿಂದ ಡಿ.10ರ ನಡುವೆ ₹ 1.97 ಕೋಟಿಯ ಕಾಮಗಾರಿ ಪೂರ್ಣಗೊಳಿಸಲಾಗಿದೆ ಎಂದು ದಾಖಲೆಗಳಲ್ಲಿ ನಮೂದಿಸಲಾಗಿತ್ತು. ನ.11ರಿಂದ ಡಿ.10ರವರೆಗೆ ಸೆಪ್ಟೆಂಬರ್ ತಿಂಗಳ ನಿರ್ವಹಣೆ ಕಾಮಗಾರಿಯನ್ನೂ ಇದೇ ಕ್ವಾರಿಯಲ್ಲಿ ನಡೆಸಲಾಗಿದೆ ಎಂದು ₹ 1.99 ಕೋಟಿ ಬಿಲ್ ಬರೆದಿದ್ದರು. ಹೆಚ್ಚೂ ಕಡಿಮೆ ತಲಾ ₹ 2 ಕೋಟಿ ವೆಚ್ಚದ ಒಟ್ಟು 14 ಬಿಲ್‌ಗಳೂ ಸೇರಿದಂತೆ ಒಟ್ಟು 17 ಬಿಲ್‌ಗಳನ್ನು ಇದೇ ರೀತಿ ಮಂಜೂರು ಮಾಡಿಸಿಕೊಳ್ಳಲಾಗಿತ್ತು. ಈಗ ಈ ಬಿಲ್‌ಗಳಲ್ಲಿ ಕಾಮಗಾರಿ ಸಂಖ್ಯೆ 310-20-000030 (ಜತಿನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್) ಹಾಗೂ 310-19-000004 ಗಳು ಹೊರತಾಗಿ ಉಳಿದೆಲ್ಲ ಕಾಮಗಾರಿಗಳ ವಿವರಗಳು ಐಎಫ್‌ಎಂಎಸ್‌ನಲ್ಲಿ ಇಲ್ಲ!

## ವಿವರ ಕಣ್ಮರೆ ಏನಿದರ ಮರ್ಮ?

ಐಎಫ್‌ಎಂಎಸ್‌ನಲ್ಲಿ ಕಾಮಗಾರಿ ವಿವರ ಕಣ್ಮರೆ ಆಗಿರುವ ಬಗ್ಗೆ ಹಣಕಾಸು ವಿಭಾಗದ ಅಧಿಕಾರಿಗಳಲ್ಲಿ ವಿಚಾರಿಸಿದಾಗ, 'ಟಿವಿಸಿಸಿ ವರದಿ ಆಧಾರದಲ್ಲಿ ವಿವರಗಳನ್ನು ಮಾರ್ಪಾಡು ಮಾಡಲಾಗುತ್ತದೆ' ಎಂದು ಸಮಜಾಯಿಷಿ ನೀಡಿದರು. ಈ ಬಗ್ಗೆ ಟಿವಿಸಿಸಿ ಅಧಿಕಾರಿಗಳನ್ನು ವಿಚಾರಿಸಿದಾಗ, 'ಅಪ್‌ಲೋಡ್ ಮಾಡಿದ ದಾಖಲೆಗಳು ಸಮರ್ಪಕವಾಗಿಲ್ಲದಿದ್ದರೆ, ಸರಿಯಾದ ದಾಖಲೆ ಅಪ್‌ಲೋಡ್ ಮಾಡುವಂತೆ ನಾವು ಸೂಚಿಸುತ್ತೇವೆಯೇ ಹೊರತು, ಅಪ್‌ಲೋಡ್ ಮಾಡಿದ ವಿವರ ಡಿಲೀಟ್ ಮಾಡುವಂತೆ ಯಾವತ್ತೂ ಹೇಳುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಒಂದೇ ಕಾಮಗಾರಿಗೆ ಎರಡೆರಡು ಬಾರಿ ಬಿಲ್ ಪಾವತಿ ಆಗಬಾರದು ಎಂಬ ಕಾರಣಕ್ಕೆ ಐಎಫ್‌ಎಂಎಸ್ ರೂಪಿಸಲಾಗಿದೆ. ಒಮ್ಮೆ ಅಪ್‌ಲೋಡ್ ಮಾಡಿದ ವಿವರ ಡಿಲೀಟ್ ಮಾಡಿದರೆ ಮತ್ತೆ ಅದೇ ಕಾಮಗಾರಿ ಸಂಖ್ಯೆ ದಾಖಲಿಸಿ ಬಿಲ್ ಮಾಡಿಸಿಕೊಳ್ಳುವ ಅಪಾಯವೂ ಇರುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ



| Date | 24-11-2020 |
|---|---|
| Page No | 3 |



# ಮರ ಕಡಿಯಲು ಆಕ್ಷೇಪಣೆ ಆಹ್ವಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂ ಆರ್‌ಸಿಎಲ್) ಆರ್.ವಿ. ರಸ್ತೆ- ಎಚ್‌ಎಸ್‌ಆರ್ ಬಡಾವಣೆ ನಡುವೆ ನಿರ್ಮಿಸಲಿರುವ ರೀಚ್‌-5 ಮಾರ್ಗದಲ್ಲಿ 'ನಮ್ಮ ಮೆಟ್ರೊ' ನಿಲ್ದಾಣಗಳ ಕಾಮಗಾರಿ ಸಲುವಾಗಿ 17 ಮರಗಳನ್ನು ತೆರವುಗೊಳಿಸ ಬೇಕಿರುತ್ತದೆ. ಈ ಕುರಿತು ಬಿಬಿಎಂಪಿಯ ಅರಣ್ಯ ವಿಭಾಗವು ಸಾರ್ವಜನಿಕರಿಂದ ಸಲಹೆ ಹಾಗೂ ಆಕ್ಷೇಪಣೆಗಳನ್ನು ಆಹ್ವಾನಿಸಿದೆ.

'ಮೆಟ್ರೊ ನಿಲ್ದಾಣ ನಿರ್ಮಾಣಕ್ಕಾಗಿ ಈಸ್ಟ್ ಎಂಡ್ ರಸ್ತೆ ಮತ್ತು ಕೇಂದ್ರ ಸಿಲ್ಕ್ ಬೋರ್ಡ್ ಜಂಕ್ಷನ್ ನಡುವೆ 2.66 ಕಿ.ಮೀ ಉದ್ದದಷ್ಟು ಜಾಗದಲ್ಲಿ ಮಾರೇನಹಳ್ಳಿ ರಸ್ತೆ ಅಕ್ಕ ಪಕ್ಕ ಮರಗಳನ್ನು ತೆರವುಗೊಳಿಸ ಬೇಕಿದೆ. ನಿರ್ಮಾಣ ಪ್ರದೇಶಗಳಲ್ಲಿ ಒಟ್ಟು 147 ಮರಗಳಿವೆ. ಅವುಗಳಲ್ಲಿ 17 ಮರಗಳನ್ನು ಹಾಗೆಯೇ ಉಳಿಸಿಕೊಂಡು 17 ಮರಗಳನ್ನು ತೆರವುಗೊಳಿಸಲು ನಿರ್ಧರಿಸಿದ್ದೇವೆ' ಎಂದು ಬಿಬಿಎಂಪಿಯ ಅರಣ್ಯಾಧಿಕಾರಿ ಚಿದಾನಂದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಮರಗಳೆಲ್ಲವೂ ಹಳೆಯವು. ಅವುಗಳ ಸ್ಥಳಾಂತರ ಅಸಾಧ್ಯ. ಹೆಚ್ಚಿನವು ಗುಲ್ ಮೊಹರ್ ಜಾತಿಯ ಮರಗಳು' ಎಂದರು.

ಈ ಮರಗಳ ಮಾಹಿತಿಯನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (https://bbmp.gov.in) ಪ್ರಕಟಿಸಲಿದ್ದೇವೆ. 10 ದಿನಗಳ ಒಳಗೆ ಸಾರ್ವಜನಿಕರು ಲಿಖಿತವಾಗಿ ಅಥವಾ ಇ-ಮೇಲ್ ಮೂಲಕ (dcfbbmp12@gmail.com) ಆಕ್ಷೇಪಣೆ ಸಲ್ಲಿಸಬಹುದು ಎಂದರು. **ವಿಳಾಸ:** ಡಿಸಿಎಫ್ (ವೃಕ್ಷ ಅಧಿಕಾರಿ, ಬಿಬಿಎಂಪಿ). ನೆಲ ಮಹಡಿ, ಅನೆಕ್ಸ್ -3 ಕಟ್ಟಡ, ಎನ್.ಆರ್.ವೃತ್ತ, ಬೆಂಗಳೂರು- 560001

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 24-11-2020 |
| --- | --- |
| Page No | 3 |

# ಬಿಲ್ ಬಾಕಿ: ಗುತ್ತಿಗೆದಾರರ ಪ್ರತಿಭಟನೆ

## ₹ 2,800 ಕೋಟಿ ಪಾವತಿ ಬಾಕಿ: ಬಿಬಿಎಂಪಿ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಾಲಿಕೆ ವತಿಯಿಂದ ಕೈಗೊಂಡ ಕಾಮಗಾರಿಗಳಿಗೆ ಬಾಕಿ ಬಿಲ್‌ಗಳನ್ನು ಪಾವತಿಸುವಂತೆ ಒತ್ತಾಯಿಸಿ ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದವರು ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಸಂಘದ ಅಧ್ಯಕ್ಷ ಕೆ.ಟಿ.ಮಂಜುನಾಥ್, 'ಬಿಬಿಎಂಪಿಯು 25 ತಿಂಗಳಿಂದ ವಿವಿಧ ಕಾಮಗಾರಿಗಳ ಬಿಲ್‌ಗಳನ್ನು ಬಾಕಿ ಉಳಿಸಿಕೊಂಡಿದೆ. 500ಕ್ಕೂ ಅಧಿಕ ಕಾಮಗಾರಿಗಳಿಗೆ ಸಂಬಂಧಿಸಿ ₹2,800 ಕೋಟಿಗೂ ಅಧಿಕ ಮೊತ್ತ ಪಾವತಿಗೆ ಬಾಕಿ ಇದೆ' ಎಂದು ದೂರಿದರು.

'ಬಿಬಿಎಂಪಿ ಅಧಿಕಾರಿಗಳು ಅನಗತ್ಯ ವಿಳಂಬ ಮಾಡುತ್ತಿದ್ದಾರೆ. ತಿಂಗಳಿಗೆ ನಾಲ್ಕೈದು ಬಾರಿ ಕಚೇರಿಗೆ ಹೋಗಿ ವಿಚಾರಿಸಿದರೂ ಹಣ ಬಿಡುಗಡೆ ಮಾಡುತ್ತಿಲ್ಲ. ಹಣ ಪಾವತಿ ವೇಳೆ ಜ್ಯೇಷ್ಠತೆ ನಿಯಮವನ್ನೂ ಪಾಲಿಸುತ್ತಿಲ್ಲ. ಲಂಚ ನೀಡಿದವರಿಗೆ ಮಾತ್ರ ಹಣ ಬಿಡುಗಡೆ ಮಾಡುತ್ತಾರೆ. ಬಹುತೇಕ ಗುತ್ತಿಗೆದಾರರು ಬ್ಯಾಂಕ್ ಮತ್ತು ಖಾಸಗಿ ಲೇವಾದಾರರಿಂದ ಬಡ್ಡಿಗೆ ಸಾಲ ಪಡೆದು ಕಾಮಗಾರಿ ನಡೆಸಿದ್ದಾರೆ. ಈ ಸಾಲ ತೀರಿಸುವುದಕ್ಕೆ ಮನೆ ಮಾರಬೇಕಾದ ಪರಿಸ್ಥಿತಿ ಎದುರಾಗಿದೆ. ಗುತ್ತಿಗೆದಾರರನ್ನು ನಂಬಿಕೊಂಡಿರುವ ಕುಟುಂಬಸ್ಥರು ಮತ್ತು ಸಾವಿರಾರು ಕೂಲಿ ಕಾರ್ಮಿಕರು ಸಂಕಷ್ಟ ಎದುರಿಸುತ್ತಿದ್ದಾರೆ' ಎಂದರು.



ಕಾಮಗಾರಿಗಳ ಬಾಕಿ ಬಿಲ್‌ಗಳನ್ನು ಪಾವತಿಸಬೇಕು ಎಂದು ಒತ್ತಾಯಿಸಿ ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದವರು ಸೋಮವಾರ ಪ್ರತಿಭಟನೆ ನಡೆಸಿದರು. ಸಂಘದ ಅಧ್ಯಕ್ಷ ಕೆ.ಟಿ.ಮಂಜುನಾಥ್, ಕಾರ್ಯದರ್ಶಿ ಟಿ.ವೆಂಕಟೇಶ್, ಸಂಘಟನಾ ಕಾರ್ಯದರ್ಶಿಗಳಾದ ಕೃಷ್ಣ, ಉಮೇಶ್, ಸತೀಶ್ ಹಾಗೂ ಖಜಾಂಚಿ ಪ್ರಕಾಶ್‌ಬಾಬು ಮತ್ತಿತರರು ಇದ್ದಾರೆ

'ಕೈಯಲ್ಲಿ ಹಣವಿಲ್ಲದ ಕಾರಣ ರಸ್ತೆ ಮತ್ತಿತರ ಮೂಲಸೌಕರ್ಯ ಕಾಮಗಾರಿಗಳನ್ನು ಸ್ಥಗಿತಗೊಳಿಸಬೇಕಾಗಿ ಬಂದಿದೆ. ಬಿಬಿಎಂಪಿಯು ಹಣ ಪಾವತಿಗೆ ಕ್ರಮ ಕೈಗೊಳ್ಳದಿದ್ದರೆ, ಈಗಾಗಲೇ ಕೈಗೆತ್ತಿಕೊಂಡಿರುವ ಎಲ್ಲ ಕಾಮಗಾರಿಗಳನ್ನೂ ಅರ್ಧದಲ್ಲೇ ಸ್ಥಗಿತಗೊಳಿಸಬೇಕಾಗುತ್ತದೆ' ಎಂದು ಅವರು ಎಚ್ಚರಿಸಿದರು.

ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಅವರು ಪ್ರತಿಭಟನೆ ನಿರತರನ್ನು ಭೇಟಿ ಮಾಡಿ ಬಾಕಿ ಬಿಲ್ ಪಾವತಿಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂಪಡೆದರು.

'ಪಾಲಿಕೆಯೂ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ಆದರೂ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳ ಜೊತೆ ಎರಡು ದಿನಗಳಲ್ಲಿ ಸಭೆ ನಡೆಸಿ ಸಮಸ್ಯೆ ಇತ್ಯರ್ಥಪಡಿಸುವುದಗಿ ಆಯುಕ್ತರು ಹೇಳಿದ್ದಾರೆ. ಹಾಗಾಗಿ ಪ್ರತಿಭಟನೆ ಹಿಂಪಡೆದಿದ್ದೇವೆ. ಕಾಮಗಾರಿ ಪೂರ್ಣಗೊಂಡ 6 ತಿಂಗಳ ಅವಧಿಯಲ್ಲಿ ಬಿಲ್ಲು ಪಾವತಿಯಾಗಬೇಕು. ಬಾಕಿ ಬಿಲ್‌ಗಳನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ್ದೇವೆ. ಸಮಸ್ಯೆ ಇತ್ಯರ್ಥಗೊಳಿಸದಿದ್ದರೆ ಪ್ರತಿಭಟನೆ ಮುಂದುವರಿಸುತ್ತೇವೆ' ಎಂದು ಕೆ.ಟಿ. ಮಂಜುನಾಥ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 24-11-2020 |
| --- | --- |
| Page No | 3A |

# ನಾಳೆ ಮಾಂಸ ಮಾರಾಟ ನಿಷೇಧ

ಬೆಂಗಳೂರು: 'ಸಾಧು ವಾಸವಾನಿ ಜಯಂತಿ' ಪ್ರಯುಕ್ತ ಇದೇ 25ರಂದು ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಾಣಿವಧೆ ಹಾಗೂ ಮಾಂಸ ಮಾರಾಟ ನಿಷೇಧಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ನಡೆಸುವಂತಿಲ್ಲ. ಮಳಿಗೆಗಳಲ್ಲಿ ಮಾಂಸ ಮಾರಾಟವನ್ನೂ ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಬಿಬಿಎಂಪಿ ಜಂಟಿ ನಿರ್ದೇಶಕರು (ಪಶುಪಾಲನೆ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮತ್ತೆ 3 ಅಂಕಿಗಿಳಿದ ಸೋಂಕಿತರ ಸಂಖ್ಯೆ

## ನವೆಂಬರ್ ತಿಂಗಳಲ್ಲಿ 6ನೇ ಬಾರಿಗೆ 1000ಕ್ಕಿಂತ ಕಡಿಮೆ ಪ್ರಕರಣ ಪತ್ತೆ | ಗುಣಮುಖರಾದವರ ಸಂಖ್ಯೆ 3.41 ಲಕ್ಷಕ್ಕೇರಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಸೋಮವಾರ 725 ಜನರಲ್ಲಿ ಕೊರೋನಾ ಸೋಂಕು ಕಾಣಿಸಿಕೊಂಡಿದ್ದು, 478 ಮಂದಿ ಗುಣಮುಖರಾಗಿದ್ದಾರೆ. 10 ಮಂದಿ ಮೃತಪಟ್ಟಿದ್ದಾರೆ.

ಹೊಸ ಪ್ರಕರಣಗಳೊಂದಿಗೆ ಈವರೆಗಿನ ಒಟ್ಟು ಸೋಂಕಿತರ ಸಂಖ್ಯೆ 3,64,390ಕ್ಕೆ ಏರಿಕೆಯಾಗಿದೆ. ಗುಣಮುಖರಾದವರಸಂಖ್ಯೆ 3,41,902ಕ್ಕೆ ತಲುಪಿದೆ. ಆಸ್ಪತ್ರೆಗಳು, ಆರೈಕೆ ಕೇಂದ್ರ ಮತ್ತು ಹೋಂ ಐಸೋಲೇಷನ್‌ನಲ್ಲಿ 18,409 ಸಕ್ರಿಯ ಸೋಂಕಿತರಿದ್ದಾರೆ. ಇದರಲ್ಲಿ 213 ಸೋಂಕಿತರು ತೀವ್ರ ನಿಗಾಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಸೋಮವಾರ 60 ವರ್ಷ ಮೇಲ್ಪಟ್ಟ 9 ವೃದ್ಧರು ಸೇರಿ ಒಟ್ಟು 10 ಮಂದಿ ಸೋಂಕಿಗೆ ಬಲಿಯಾಗಿದ್ದಾರೆ. ಈ ಮೂಲಕ ರಾಜಧಾನಿಯಲ್ಲಿ ಸೋಂಕಿನಿಂದ ಸಾವನ್ನಪ್ಪಿದವರ ಸಂಖ್ಯೆ 4,078ಕ್ಕೆ ಏರಿಕೆಯಾಗಿದೆ. ನ.15ರಂದು 840 ಪ್ರಕರಣ ಹಾಗೂ ನ.16ರಂದು 597, ನ.17ರಂದು 729, ನ.18ರಂದು 933 ಕೇಸ್‌ಗಳು, ಇನ್ನು ನ.21ರಂದು 972 ಪ್ರಕರಣಗಳು ವರದಿಯಾಗಿದ್ದವು.



## ಕೋವಿಡ್ ಸೇವೆಯಿಂದ 64 ಉಪನ್ಯಾಸಕರ ಬಿಡುಗಡೆ

ನಗರದಲ್ಲಿ ಕಾಲೇಜುಗಳು ಪುನರ್ ಆರಂಭಗೊಂಡ ಹಿನ್ನೆಲೆಯಲ್ಲಿ ಕೊರೋನಾ ಸೋಂಕು ನಿಯಂತ್ರಣ ಕಾರ್ಯಕ್ಕೆ ನಿಯೋಜನೆಗೊಂಡಿದ್ದ ಬಿಬಿಎಂಪಿಯ 64 ಉಪನ್ಯಾಸಕರನ್ನು ಕೋವಿಡ್ ಕಾರ್ಯದಿಂದ ಬಿಡುಗಡೆಗೊಳಿಸಲಾಗಿದೆ.

ಪದವಿ ತರಗತಿಗೆ ಬೋಧನೆ ಮಾಡುವ ಪಾಲಿಕೆಯ ನಾಲ್ಕು ಕಾಲೇಜುಗಳ ಉಪನ್ಯಾಸಕ ಸಿಬ್ಬಂದಿಯನ್ನು ಕೋವಿಡ್ ಕಾರ್ಯದಿಂದ ಬಿಡುಗಡೆ ಮಾಡಲಾಗಿದೆ ಎಂದು ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತ ಜೆ ಮಂಜುನಾಥ್ ತಿಳಿಸಿದ್ದಾರೆ.

ಸರ್ಕಾರಿ ಕಾಲೇಜುಗಳಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೋಧನೆ ಮಾಡಲು ತೆರಳುವ ಸಿಬ್ಬಂದಿಗೆ ಕಾಲೇಜು ಮುಖ್ಯಸ್ಥರಿಂದ ಸೂಚನಾ ಪತ್ರದೊಂದಿಗೆ ಕೊರೋನಾ ಸೇವೆಯಿಂದ ಬಿಡುಗಡೆ ಮಾಡಲು ಮನವಿ ಮಾಡಿದಲ್ಲಿ ಬಿಡುಗಡೆ ಮಾಡಲಾಗುವುದು. ಬೋಧನೆಗೆ ತೆರಳುವ ಮುನ್ನ ಅವರನ್ನು ಕಡ್ಡಾಯವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸಿ, ನೆಗೆಟಿವ್ ಬಂದರೆ ಮಾತ್ರ ಬಿಡುಗಡೆ ಮಾಡಲಾಗುತ್ತದೆ. ಒಂದುವೇಳೆ ಬೋಧನೆ ನೆಪದಲ್ಲಿ ಕೋವಿಡ್ ಕಾರ್ಯದಿಂದ ನುಣಚಿಕೊಳ್ಳಲು ಮುಂದಾದಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ ಅನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

## ವಿದ್ಯಾರ್ಥಿಗಳಲ್ಲಿ ನಿನ್ನೆ ಕೋವಿಡ್ ಸೋಂಕು ಪತ್ತೆ ಇಲ್ಲ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕಾಲೇಜುಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ ನಗರದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಕೊರೋನಾ ಸೋಂಕು ಪರೀಕ್ಷೆ ಮುಂದುವರೆದಿದ್ದು, ಸೋಮವಾರ ಯಾರಲ್ಲೂ ಸೋಂಕು ಕಾಣಿಸಿಕೊಂಡಿಲ್ಲ ಎಂದು ಬಿಬಿಎಂಪಿ ತಿಳಿಸಿದೆ. ಸೋಮವಾರ ಒಟ್ಟು 4,156 ಕೋವಿಡ್ ಪರೀಕ್ಷೆ ನಡೆಸಲಾಗಿದ್ದು, ಈ ಪೈಕಿ 259 ಶಿಕ್ಷಕರು, 3,377 ವಿದ್ಯಾರ್ಥಿಗಳು ಹಾಗೂ 527 ಇತರೆ ಸಿಬ್ಬಂದಿಯಾಗಿದ್ದಾರೆ. ಒಟ್ಟು 608 ಕೇಂದ್ರದಲ್ಲಿ ಪರೀಕ್ಷೆ ನಡೆಸಲಾಗಿದ್ದು, ಪರೀಕ್ಷೆಗೆ ಬಿಬಿಎಂಪಿ 123 ತಂಡ ನಿಯೋಜಿಸಿದೆ.

ಈವರೆಗಿನ ಸೋಂಕು ದೃಢಪಟ್ಟ 167 ಮಂದಿಯ ಪೈಕಿ 116 ಜನ ವಿದ್ಯಾರ್ಥಿಗಳು ಹಾಗೂ 51 ಮಂದಿ ಸಿಬ್ಬಂದಿಯಾಗಿದ್ದಾರೆ. ಆರ್‌ಆರ್‌ನಗರ ಮತ್ತು ಪೂರ್ವ ವಲಯದಲ್ಲಿ ಅತಿ ಹೆಚ್ಚು ವಿದ್ಯಾರ್ಥಿ ಶಿಕ್ಷಕರನ್ನು ಸೋಂಕು ದೃಢಪಟ್ಟಿದೆ. ಈವರೆಗೆ ಆರ್‌ಆರ್‌ನಗರದಲ್ಲಿ 7,668 ಮಂದಿಯನ್ನು ಪರೀಕ್ಷೆ ನಡೆಸಲಾಗಿದ್ದು, 35 ವಿದ್ಯಾರ್ಥಿ ಹಾಗೂ ಶಿಕ್ಷಕರಲ್ಲಿ ಸೋಂಕು ದೃಢಪಟ್ಟಿದೆ. ಪೂರ್ವ ವಲಯದಲ್ಲಿ 6,064 ಮಂದಿ ಪರೀಕ್ಷೆ ನಡೆಸಿದ್ದು, 36 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ.

ಉಳಿದಂತೆ ಬೊಮ್ಮನಹಳ್ಳಿ ವಲಯದಲ್ಲಿ ನಾಲ್ವರಲ್ಲಿ, ದಾಸರಹಳ್ಳಿಯಲ್ಲಿ 20, ಮಹದೇವಪುರದಲ್ಲಿ ಇಬ್ಬರು, ಪಶ್ಚಿಮದಲ್ಲಿ 26, ಯಲಹಂಕದಲ್ಲಿ 29 ಹಾಗೂ ದಕ್ಷಿಣ ವಲಯದಲ್ಲಿ 15 ವಿದ್ಯಾರ್ಥಿ ಹಾಗೂ ಶಿಕ್ಷಕರಲ್ಲಿ ಸೋಂಕು ದೃಢಪಟ್ಟಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕನ್ನಡಪ್ರಭ

| Date | 24-11-2020 |
| --- | --- |
| Page No | 3 |


**ಪ್ರತಿಭಟನೆ** ಬಿಬಿಎಂಪಿಗೆ ಗುತ್ತಿಗೆದಾರರ ಎಚ್ಚರಿಕೆ | 2 ವರ್ಷದಿಂದ 2 ಸಾವಿರ ಗುತ್ತಿಗೆದಾರರಿಗೆ ₹2800 ಕೋಟಿ ಬಾಕಿ

# 'ಬಾಕಿ ಪಾವತಿಸದಿದ್ದರೆ ಕಾಮಗಾರಿ ಸ್ಥಗಿತ'

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕಾಮಗಾರಿಯ ಬಾಕಿ ಉಳಿಸಿಕೊಂಡ ಹಣ ಬಿಡುಗಡೆ ಮಾಡದಿದ್ದರೆ ನಗರದಲ್ಲಿ ಪ್ರಗತಿಯಲ್ಲಿರುವ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸುವುದಾಗಿ ಬಿಬಿಎಂಪಿ ಗುತ್ತಿಗೆದಾರರು ಎಚ್ಚರಿಕೆ ನೀಡಿದ್ದಾರೆ.

ಸೋಮವಾರ ಬಿಬಿಎಂಪಿ ಕೇಂದ್ರ ಕಚೇರಿಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದ ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರು, ಕಳೆದ 25 ತಿಂಗಳಿಂದಗುತ್ತಿಗೆದಾರರಿಗೆ₹2,800ಕೋಟಿಗಿಂತ ಅಧಿಕ ಮೊತ್ತದ ಬಿಲ್ ಬಾಕಿ ಉಳಿಸಿಕೊಳ್ಳಲಾಗಿದೆ. ಸರ್ಕಾರದ ಯಾವುದೇ ಇಲಾಖೆಗಳ ಗುತ್ತಿಗೆ ಕಾರ್ಯಕ್ಕೆ ಗರಿಷ್ಠ ಒಂದು ವರ್ಷದೊಳಗೆ ಬಿಲ್ ಪಾವತಿ ಮಾಡಲಾಗುತ್ತಿದೆ. ಆದರೆ, ಬಿಬಿಎಂಪಿ ನೀಡಿದ್ದ ಗುತ್ತಿಗೆ ಕಾಮಗಾರಿಗಳನ್ನು ಸಾಲ ಮಾಡಿ ನಿಗದಿತ ಅವಧಿಗೆ ಪೂರ್ಣಗೊಳಿಸಿದ್ದರೂ, ಎರಡು ವರ್ಷವಾದರೂ ಬಿಲ್ ನೀಡುತ್ತಿಲ್ಲ ಎಂದರು.

ಸುಮಾರು ಎರಡು ಸಾವಿರ ಗುತ್ತಿಗೆದಾರರಿಗೆ ₹2,800 ಕೋಟಿಗಿಂತ ಅಧಿಕ ಹಣ ಬಾಕಿಯಿದೆ.




ಬಾಕಿ ಹಣ ಪಾವತಿಸದ ಬಿಬಿಎಂಪಿ ವಿರುದ್ಧ ಗುತ್ತಿಗೆದಾರರು ಪಾಲಿಕೆ ಕೇಂದ್ರ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಶೀಘ್ರವೇ ಹಣ ಪಾವತಿಸುವಂತೆ ಒತ್ತಾಯಿಸಿದರು.

ಕೊರೋನಾ ಸಂದರ್ಭ ಸೇರಿ ಸುಮಾರು ಶೇ.50 ಗುತ್ತಿಗೆದಾರರು ಸಾಲ ಮಾಡಿಕೊಂಡು ಅದನ್ನು ಮರುಪಾವತಿಸಲಾಗದೆ ಮನೆ ಮತ್ತು ಇತರೆ ಆಸ್ತಿಗಳನ್ನು ಸಾಲಕ್ಕಾಗಿ ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಮಕ್ಕಳ ಶಾಲೆ-ಕಾಲೇಜುಗಳ ಶುಲ್ಕ ಪಾವತಿಸಲೂ ಪರದಾಡುವ ಪರಿಸ್ಥಿತಿ ಉಂಟಾಗಿದೆ. ಅಧಿಕಾರಿಗಳು ಬಿಲ್ ಪಾವತಿಗೆ ಕಮೀಷನ್ ಕೇಳುತ್ತಿದ್ದು, ಬಿಲ್ ಪಾವತಿಗೆ ಜೇಷ್ಠತೆ ಉಲ್ಲಂಘಿಸಿ ಹಣ ನೀಡುತ್ತಿದ್ದಾರೆಎಂದು ಆಕ್ರೋಶ ವ್ಯಕ್ತಪಡಿಸಿದಅವರು, ಕೂಡಲೇ2020ರಮಾರ್ಚ್ ಅಂತ್ಯದ ವರೆಗೆ ಬಾಕಿ ಇರುವ ಎಲ್ಲ ಬಿಲ್‌ಗಳನ್ನು ಪಾವತಿ ಮಾಡಬೇಕು ಎಂದು ಆಗ್ರಹಿಸಿದರು.

**ರಸ್ತೆ ಬಂದ್ ಮಾಡುವ ಎಚ್ಚರಿಕೆ:** ಬಿಲ್ ಬಾಕಿ ಬಿಡುಗಡೆ ಮಾಡುವಂತೆ ಈಗಾಗಲೇ ನಾಲ್ಕೈದು ಬಾರಿಮನವಿಮಾಡಿದ್ದರೂಸ್ಪಂದಿಸದಹಿನ್ನೆಲೆಯಲ್ಲಿ ನಗರದ 500ಕ್ಕೂ ಹೆಚ್ಚು ಪ್ರಗತಿಯಲ್ಲಿದ್ದ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ. ಇನ್ನಷ್ಟು ವಿಳಂಬ ಮಾಡಿದಲ್ಲಿ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸುವಜತೆಗೆ, ನಗರದಮುಖ್ಯ ರಸ್ತೆಗಳಲ್ಲಿ ವಾಹನಗಳನ್ನು ತಡೆದು ರಸ್ತೆ ಬಂದ್ ಮಾಡುವ ಮೂಲಕ ಉಗ್ರ ಪ್ರತಿಭಟನೆ ಮಾಡುವುದಾಗಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ಎಚ್ಚರಿಕೆ ನೀಡಿದ್ದಾರೆ. ಸಂಘದ ಪದಾಧಿಕಾರಿಗಳಾದ ಎಂ.ದೇವರಾಜ್, ವೆಂಕಟೇಶ್, ರವಿಕುಮಾರ್, ಶಿವಣ್ಣ ಇದ್ದರು.

VK ವಿಜಯ ಕರ್ನಾಟಕ

| Date | 24-11-2020 |
|---|---|
| Page No | 7 |


ಕೊರೊನಾ ಸಂಕಷ್ಟ ನಡುವೆ ನಗರ ವಾಸಿಗಳಿಗೆ ಪಾಲಿಕೆಯಿಂದ ಮತ್ತೊಂದು ಶಾಕ್

# ಆಸ್ತಿ ಮಾಲೀಕರಿಗೆ ಸಾರಿಗೆ ಸೆಸ್

■ **ನಾಗಪ್ಪ ನಾಗನಾಯಕನಹಳ್ಳಿ** ಬೆಂಗಳೂರು
nagappa.narayanappa@timesgroup.com

ಕೊರೊನಾ ಸೋಂಕಿನಿಂದ ತತ್ತರಿಸಿ ಹೋಗಿರುವ ರಾಜಧಾನಿಯ ಜನತೆಗೆ ಬಿಬಿಎಂಪಿಯು ಮತ್ತೊಂದು ಶಾಕ್ ನೀಡಿದೆ. ಆಸ್ತಿ ಮಾಲೀಕರಿಗೆ ಶೇ.2ರಷ್ಟು ಭೂಸಾರಿಗೆ ಉಪಕರ(ಸೆಸ್) ವಿಧಿಸಲು ನಿರ್ಣಯ ತೆಗೆದುಕೊಂಡಿದ್ದು, 2021ರ ಏ.1ರಿಂದ ಜಾರಿಗೆ ಬರುವ ಸಾಧ್ಯತೆಗಳಿವೆ.

ಆರ್ಥಿಕವಾಗಿ ಸಂಕಷ್ಟದಲ್ಲಿರುವ ಪಾಲಿಕೆ, ಆದರಿಂದ ಪಾರಾಗಲು ಜನರ ಮೇಲೆ ತೆರಿಗೆಗಳ ಭಾರ ಹೊರಿಸುತ್ತಿದೆ. ಆಸ್ತಿ ತೆರಿಗೆ ಪರಿಷ್ಕರಣೆ ಜತೆಗೆ ಕಸ ನಿರ್ವಹಣೆಗೆ ಬಳಕೆದಾರರ ಶುಲ್ಕವನ್ನು ಪ್ರತಿ ಮನೆಯಿಂದ ವಸೂಲು ಮಾಡಲು ಮುಂದಾಗಿದೆ. ಈ ನಡುವೆ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಸಾರಿಗೆ ಸೆಸ್ ವಿಧಿಸುವ ಪ್ರಸ್ತಾವಕ್ಕೆ ಮರುಜೀವ ನೀಡಲಾಗಿದೆ.

ನಗರದ ಆಸ್ತಿ ಮಾಲೀಕರ ಮೇಲೆ ಶೇ 2ರಷ್ಟು ಸಾರಿಗೆ ಸೆಸ್ ವಿಧಿಸುವ ಪ್ರಸ್ತಾವಕ್ಕೆ ಮೊದಲಿನಿಂದಲೂ ವಿರೋಧ ವ್ಯಕ್ತಪಡಿಸುತ್ತಿದ್ದ ಬಿಜೆಪಿ, ಪಾಲಿಕೆಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಬಳಿಕ ಸರಕಾರದ ಆದೇಶಕ್ಕೆ ಮಣಿದು ಉಪಕರ ಸಂಗ್ರಹಿಸಲು 2020ರ ಜ. 28ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ತೆಗೆದುಕೊಂಡಿತ್ತು. ಇದಕ್ಕೆ ಕಾಂಗ್ರೆಸ್, ಜೆಡಿಎಸ್‌ನಿಂದ ತೀವ್ರ ಆಕ್ಷೇಪ ವ್ಯಕ್ತವಾದ ಬಳಿಕ ತನ್ನ ನಿರ್ಧಾರದಿಂದ ಹಿಂದೆ ಸರಿದಿತ್ತು. ಪಾಲಿಕೆ ಆಡಳಿತಾಧಿಕಾರಿ ಗೌರವ್ ಗುಪ್ತ ಅವರು ಸೆ. 26ರಂದು ಆಸ್ತಿ ತೆರಿಗೆಯ ಮೇಲೆ ಶೇ 2ರಷ್ಟು ನಗರ ಭೂಸಾರಿಗೆ ಉಪಕರ ವಿಧಿಸುವ ಪ್ರಸ್ತಾವಕ್ಕೆ ಅನುಮೋದನೆ ನೀಡಿದ್ದಾರೆ. ಹೀಗಾಗಿ ಆಸ್ತಿ ತೆರಿಗೆಯೊಂದಿಗೆ ಒಟ್ಟು ಶೇ 24ರಷ್ಟು ಸೆಸ್ (ಘನತ್ಯಾಜ್ಯ ನಿರ್ವಹಣೆ ಸೆಸ್ ಹೊರತುಪಡಿಸಿ) ಪಾವತಿಸುತ್ತಿರುವ ಆಸ್ತಿದಾರರು ಇನ್ನು ಮುಂದೆ ಶೇ 26ರಷ್ಟು ಉಪಕರ ಕಟ್ಟಬೇಕಾಗುತ್ತದೆ.

ರಾಜ್ಯ ಸರಕಾರವು 2013ರಲ್ಲಿ ಕೆಎಂಸಿ ಕಾಯಿದೆಗೆ ತಿದ್ದುಪಡಿ ತಂದು ಆಸ್ತಿ ತೆರಿಗೆ ಮೇಲೆ ಶೇ 2ರಷ್ಟು ಸಾರಿಗೆ ಉಪಕರ (ಸೆಸ್) ಸಂಗ್ರಹಿಸಲು ಅಧಿಸೂಚನೆ ಹೊರಡಿಸಿತ್ತು. ಈ ಉಪಕರವನ್ನು ನಗರ ಭೂಸಾರಿಗೆ ಇಲಾಖೆಗೆ ಪಾವತಿಸಲು ಸೂಚಿಸಿತ್ತು. ಕೆಎಂಸಿ ಕಾಯಿದೆ 149 (ಎ) ಅನ್ವಯ ಈ ಸೆಸ್ ಅನ್ನು ಪಾಲಿಕೆಯು ಬಳಸಿಕೊಳ್ಳಲು ಅವಕಾಶವಿಲ್ಲ. ಆಸ್ತಿ ತೆರಿಗೆಯೊಂದಿಗೆ ಸಂಗ್ರಹಿಸಲಾಗುವ ಸಾರಿಗೆ ಸೆಸ್ ಅನ್ನು ಪಾಲಿಕೆಯು ಭೂಸಾರಿಗೆ ನಿರ್ದೇಶನಾಲಯಕ್ಕೆ ವರ್ಗಾಯಿಸಲಿದೆ. ಆ ಸಂಸ್ಥೆಯು ಉಪಕರವನ್ನು ಸಮೂಹ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಲು ಉಪಯೋಗಿಸಲಿದೆ.

ಆಸ್ತಿದಾರರ ಮೇಲೆ ಭೂಸಾರಿಗೆ ಉಪಕರ ವಿಧಿಸಿದರೆ, ಹೆಚ್ಚಿನ ಹೊರೆಬೀಳಲಿದೆ ಎಂಬ ಕಾರಣ ನೀಡಿ ಆದೇಶ ಹಿಂಪಡೆಯುವಂತೆ 2014ರ ಮೇ 28ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಯಿತು. ಇದಕ್ಕೆ ಅನುಮೋದನೆ ಕೋರಿ ಪಾಲಿಕೆ ಆಯುಕ್ತರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತಿರಸ್ಕರಿಸಿದ್ದರು. ಉಪಕರ ಸಂಗ್ರಹಿಸದಿರುವುದರಿಂದ ರಾಜಸ್ವ ನಷ್ಟ ಉಂಟಾಗಿರುವ ಕುರಿತು ಲೆಕ್ಕಪರಿಶೋಧಕರು ಹಲವು ಬಾರಿ ಆಡಿಟ್‌ನಲ್ಲಿ ಆಕ್ಷೇಪಣೆ ಸಲ್ಲಿಸಿದ್ದಾರೆ. ಹಾಗಾಗಿ, ಸೆಸ್ ಸಂಗ್ರಹಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳ ಆಸ್ತಿ ತೆರಿಗೆ ಮೇಲೆ ಶೇ 2ರಷ್ಟು ಸಾರಿಗೆ ಸೆಸ್ ವಿಧಿಸಿ ಸಂಗ್ರಹಿಸಲು ಸೂಕ್ತ ತೀರ್ಮಾನ ಕೈಗೊಳ್ಳುವಂತೆ ಆಯುಕ್ತರು ಮಂಡಿಸಿದ್ದ 2018ರ ಜೂ. 28ರ ಟಿಪ್ಪಣಿಗೆ ಆಡಳಿತಾಧಿಕಾರಿ ಅನುಮೋದನೆ ನೀಡಿದ್ದಾರೆ.




## 150 ಕೋಟಿ ರೂ. ಸಂಗ್ರಹದ ನಿರೀಕ್ಷೆ

ಪಾಲಿಕೆಯು ವಾರ್ಷಿಕ 3500 ಕೋಟಿ ರೂ. ತೆರಿಗೆ ಸಂಗ್ರಹ ಗುರಿ ಹೊಂದಿದೆ. ಭೂಸಾರಿಗೆ ಉಪಕರದಿಂದ 150 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ. ಪ್ರಸ್ತುತ ಆಸ್ತಿ ತೆರಿಗೆ ಮೇಲೆ ಗ್ರಂಥಾಲಯ, ಭಿಕ್ಷುಕರ ಪುನರ್ವಸತಿ, ಆರೋಗ್ಯ ಸೆಸ್ ಸೇರಿ ಒಟ್ಟು ಶೇ 24ರಷ್ಟು ಉಪಕರ ಸಂಗ್ರಹಿಸಲಾಗುತ್ತಿದೆ. ಇದಲ್ಲದೆ, ಪ್ರತ್ಯೇಕವಾಗಿ ವಸತಿ ನಿವೇಶನಗಳು, ಕಟ್ಟಡಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಕಸದ ಸೆಸ್ ವಿಧಿಸಿ, ವಸೂಲು ಮಾಡಲಾಗುತ್ತಿದೆ. 1000 ಚ.ಅಡಿ ವಿಸ್ತೀರ್ಣದೊಳಗಿನ ವಸತಿ ಕಟ್ಟಡಗಳಿಗೆ 120 ರೂ. ಮತ್ತು ಅದಕ್ಕಿಂತ ಮೇಲ್ಪಟ್ಟ ವಿಸ್ತೀರ್ಣದ ಕಟ್ಟಡಗಳಿಗೆ 360 ರೂ. ವಿಧಿಸಲಾಗುತ್ತಿದೆ. ಕಸ ನಿರ್ವಹಣೆ ಮತ್ತು ಆರೋಗ್ಯ ಉಪಕರವನ್ನು ಪಾಲಿಕೆಯೇ ಬಳಸಿಕೊಳ್ಳುತ್ತಿದೆ. ಗ್ರಂಥಾಲಯ ಸೆಸ್ ಅನ್ನು ಗ್ರಂಥಾಲಯ ಇಲಾಖೆಗೆ ಮತ್ತು ಭಿಕ್ಷುಕರ ಪುನರ್ವಸತಿ ಸೆಸ್ ಅನ್ನು ಸಮಾಜ ಕಲ್ಯಾಣ ಇಲಾಖೆ ವರ್ಗಾಯಿಸಲಾಗುತ್ತಿದೆ.

**ಆಸ್ತಿದಾರರಿಗೆ ಶೇ.2ರಷ್ಟು ಸಾರಿಗೆ ಸೆಸ್ ವಿಧಿಸಲು ತೀರ್ಮಾನ**

**ಭೂಸಾರಿಗೆ ಉಪಕರ ವಿಧಿಸುವ ಪ್ರಸ್ತಾವಕ್ಕೆ ಆಡಳಿತಾಧಿಕಾರಿ ಅನುಮೋದನೆ**

**2021ರ ಏ.1ರಿಂದಲೇ ಜಾರಿ ಸಾಧ್ಯತೆ**

| ಸದ್ಯ ವಿಧಿಸುತ್ತಿರುವ ಉಪಕರ | |
|---|---|
| ಗ್ರಂಥಾಲಯ ಸೆಸ್ | ಶೇ.06 |
| ಭಿಕ್ಷುಕರ ಸೆಸ್ | ಶೇ.03 |
| ಆರೋಗ್ಯ ಸೆಸ್ | ಶೇ.15 |

ವಿಜಯ ಕರ್ನಾಟಕ

| Date | 24-11-2020 |
| --- | --- |
| Page No | 7 |

# ಹಸಿರು ಪಟಾಕಿ ಮಾರಾಟ ನಿಯಮ ಉಲ್ಲಂಘನೆ ವರದಿ ಸಲ್ಲಿಕೆಗೆ ಸೂಚನೆ

**ಬೆಂಗಳೂರು:** ದೀಪಾವಳಿ ಹಬ್ಬದ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನಷ್ಟೇ ಮಾರಾಟ ಮಾಡಲಾಗಿದೆಯೇ ಮತ್ತು ನಿಯಮ ಉಲ್ಲಂಘಿಸಿದವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಮಾಹಿತಿ ಒದಗಿಸುವಂತೆ ಹೈಕೋರ್ಟ್, ರಾಜ್ಯ ಸರಕಾರ ಮತ್ತು ಬಿಬಿಎಂಪಿಗೆ ಸೂಚಿಸಿದೆ. ಚಾರ್ಟರ್ಡ್ ಅಕೌಂಟೆಂಟ್ ಡಾ.ಎ.ಎಸ್. ವಿಶ್ವಭರತ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ, ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕ್ ನೇತೃತ್ವದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿತ್ತು.

ಕೆಎಸ್‌ಪಿಸಿಬಿ ಪರ ವಕೀಲರು, ಹೈಕೋರ್ಟ್ ನಿರ್ದೇಶನದಂತೆ ದೀಪಾವಳಿ ಬಳಿಕ ಶಬ್ದಮಾಲಿನ್ಯದ ಪ್ರಮಾಣದ ಅಳೆಯಲಾಗಿದೆ. ಕಳೆದ ದೀಪಾವಳಿಗೆ ಹೋಲಿಸಿದರೆ ಈ ಬಾರಿ ಶೇ.30ರಿಂದ 35 ರಷ್ಟು ವಾಯುಮಾಲಿನ್ಯ ಪ್ರಮಾಣ ಕಡಿಮೆಯಾಗಿದೆ ಎಂದು ತಿಳಿಸಿ ಪ್ರಮಾಣ ಪತ್ರ ಸಲ್ಲಿಸಿದರು. ಅರ್ಜಿಯ ಕಳೆದ ವಿಚಾರಣೆ ವೇಳೆ ರಾಜ್ಯದಲ್ಲಿ ಹಸಿರು ಮಾರಾಟಕ್ಕೆ ಅನುಮತಿ ನೀಡಿದ್ದ ಹೈಕೋರ್ಟ್, ಇತರೆ ಪಟಾಕಿಗಳು ಮಾರಾಟವಾಗದಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು. ಒಂದು ವೇಳೆ ನಿಯಮಗಳನ್ನು ಉಲ್ಲಂಘಿಸಿದರೆ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಸರಕಾರ ಮತ್ತು ಬಿಬಿಎಂಪಿಗೆ ಸೂಚಿಸಿತ್ತು.

VK ವಿಜಯ ಕರ್ನಾಟಕ

| Date | 24-11-2020 |
| --- | --- |
| Page No | 7 |

### ಹೂಳು ತೆಗೆಯಲು ಕೆರೆ ನೀರು ಹೊರಬಿಟ್ಟ ಅಧಿಕಾರಿಗಳು | ಒಳ ಹರಿವು ಬಂದ್

# ಕೋಟಿ ಸುರಿದರೂ ಹನಿ ನೀರಿಲ್ಲ

**ವಿಕ ಸುದ್ದಿಲೋಕ** ಬೆಂಗಳೂರು

ಅಧಿಕಾರಿಗಳ ಬೇಜವಾಬ್ದಾರಿ, ಅವೈಜ್ಞಾನಿಕ ಕಾಮಗಾರಿಯಿಂದ ಕೋಟ್ಯಂತರ ರೂ. ವೆಚ್ಚ ಮಾಡಿ ಅಭಿವೃದ್ಧಿಪಡಿಸಿದ ನಗರದ ವಿಭೂತಿಪುರ ಕೆರೆಯಲ್ಲಿ ಹನಿ ನೀರು ಸಂಗ್ರಹವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

**ಅವೈಜ್ಞಾನಿಕ ಕಾಮಗಾರಿಯಿಂದ ಸುತ್ತಮುತ್ತಲ ಪ್ರದೇಶದಲ್ಲಿ ಅಂತರ್ಜಲ ಕುಸಿತ**



ನೀರಿಲ್ಲದೆ ಹುಲ್ಲುಗಾವಲಿನಂತೆ ಗೋಚರಿಸುತ್ತಿರುವ ವಿಭೂತಿಪುರ ಕೆರೆ

ಎರಡು ವರ್ಷಗಳ ಹಿಂದಷ್ಟೇ ವಿಭೂತಿಪುರ ಕೆರೆಯನ್ನು ಸುಮಾರು 3 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿತ್ತು. ಈ ವರ್ಷ ಧಾರಾಕಾರ ಮಳೆ ಸುರಿದರೂ ಕೆರೆಯಲ್ಲಿ ಹನಿ ನೀರು ಸಂಗ್ರಹವಿಲ್ಲ. ಸದ್ಯ ಹುಲ್ಲುಗಾವಲಿನಂತೆ ಗೋಚರಿಸುತ್ತಿದೆ. ಒಳ ಹರಿಯುವ ನೀರನ್ನು ತಡೆಗಟ್ಟಿ, ಇದ್ದ ನೀರನ್ನು ಹೊರ ಬಿಟ್ಟಿರುವುದರಿಂದ ಕೆರೆಯು ಮೂಲ ಸ್ವರೂಪ ಕಳೆದುಕೊಳ್ಳುವಂತಾಗಿದೆ.

ಸ್ಥಳೀಯರ ನಿರಂತರ ಹೋರಾಟದ ಬಳಿಕ ಕೆರೆ ಪುನಶ್ಚೇತನ ಕಾಮಗಾರಿ ಕೈಗೊಳ್ಳಲಾಗಿತ್ತು. ಬಳಿಕವೂ ಕೆರೆ ದುಸ್ಥಿತಿಗೆ ತಲುಪಿರುವುದು ಸ್ಥಳೀಯರಲ್ಲಿ ಬೇಸರ ಮೂಡಿಸಿದೆ.

''ಕೆರೆಯ ಹೂಳು ತೆಗೆಯಲು ನಮ್ಮ ವಿರೋಧವಿತ್ತು. ಆದರೆ ಅವೈಜ್ಞಾನಿಕವಾಗಿ ಯೋಜನೆಯನ್ನು ಜಾರಿಗೊಳಿಸಲು ಮುಂದಾದರು. ಕೆರೆಯ ಒಳಗೆ ನೀರು ಬರುವುದನ್ನೇ ಬಂದ್ ಮಾಡಲಾಗಿದೆ. ಕೆರೆಯಲ್ಲಿದ್ದ ನೀರನ್ನು ಹೊರ ಬಿಡಲಾಗಿದೆ. ಹೀಗಿರುವಾಗ ಕೆರೆಯಲ್ಲಿ ನೀರು ಇರುವುದಾದರೂ ಹೇಗೆ,'' ಎಂದು ಸ್ಥಳೀಯರಾದ ವಿಭಾ ಸಹಾ ಪ್ರಶ್ನಿಸಿದರು.

ಲಾಲ್ ಬಹಾದ್ದೂರ್ ಶಾಸ್ತ್ರಿನಗರದ ರಾಮ್ ಕುಮಾರ್ ಈ ಬಗ್ಗೆ ಮಾತನಾಡಿ, ''ನಾಗರಿಕರು, ಕೆರೆ ಸಂರಕ್ಷಣೆ ಹೋರಾಟಗಾರರು ಅಧಿಕಾರಿಗಳನ್ನು ಭೇಟಿ ಮಾಡಿ ತ್ಯಾಜ್ಯ ಶುದ್ಧೀಕರಣ ಘಟಕ (ಎಸ್‌ಟಿಪಿ) ಸ್ಥಾಪಿಸಲು ಮನವಿ ಮಾಡಿದ್ದೆವು. ಆರಂಭದಲ್ಲಿ ಎಸ್‌ಟಿಪಿ ಸ್ಥಾಪಿಸಲು ಆಗುವುದಿಲ್ಲ ಎಂದಿದ್ದ ಅಧಿಕಾರಿಗಳು ಬಳಿಕ ಘಟಕ ಸ್ಥಾಪನೆಯ ಭರವಸೆ ನೀಡಿದ್ದಾರೆ,'' ಎಂದರು.

**ನಿರ್ವಹಣೆ ನಿರ್ಲಕ್ಷ್ಯ :** ಕೆರೆ ನಿರ್ವಹಣೆಯಲ್ಲೂ ಪಾಲಿಕೆ ನಿರ್ಲಕ್ಷ್ಯ ವಹಿಸಿದೆ. ಕೆರೆ ಸುತ್ತಮುತ್ತ ದೀಪಗಳನ್ನು ಅಳವಡಿಸಿಲ್ಲ.

''ಕೆರೆ ಪುನಶ್ಚೇತನ ನಿಟ್ಟಿನಲ್ಲಿ ಹಲವು ಬಾರಿ ವೈಫಲ್ಯಕ್ಕೀಡಾದರೂ ಮತ್ತೆ ಅದೇ ಮಾದರಿಗಳನ್ನು ಅನುಸರಿಸಲಾಗುತ್ತಿದೆ. ಇದರಿಂದ ಕೆರೆ ಪರಿಸರಕ್ಕೆ ಧಕ್ಕೆ ಆಗುತ್ತಿದೆ,'' ಎಂದು ಆಕ್ಷನ್ ಏಯ್ಡ್ ಆಸೋಸಿಯೇಶನ್‌ನ ಪ್ರೋಗ್ರಾಮ್ ಮ್ಯಾನೇಜರ್ ರಾಘವೇಂದ್ರ ಬಿ. ಪಚಾಪುರ್ ಹೇಳಿದರು. ಬಿಬಿಎಂಪಿ ಮುಖ್ಯ ಎಂಜಿನಿಯರ್ (ಕೆರೆ ವಿಭಾಗ) ಮೋಹನ್ ಕೃಷ್ಣ ಅವರನ್ನು ಈ ಬಗ್ಗೆ ಪ್ರಶ್ನಿಸಿದಾಗ, ''ಕೆರೆಗೆ ನೀರು ಹರಿಯದಿರುವುದರಿಂದ ಸಮಸ್ಯೆಯಾಗಿದೆ. ಈ ಸಮಸ್ಯೆ ಪರಿಹರಿಸಲಾಗುವುದು,'' ಎಂದರು.

**ಅಂತರ್ಜಲ ಮಟ್ಟ ಇಳಿಕೆ**

ಕೆರೆ ನೀರು ಸಂಪೂರ್ಣ ಖಾಲಿಯಾಗಿರುವುದರಿಂದ ಆಸುಪಾಸಿನ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಭಾರಿ ಪ್ರಮಾಣದಲ್ಲಿ ಕುಸಿದಿದೆ. ಇದರಿಂದಾಗಿ ಸುತ್ತಮುತ್ತಲ ಪ್ರದೇಶದಲ್ಲಿ ನೀರಿಗೆ ಸಮಸ್ಯೆಯಾಗುತ್ತಿದೆ. ''ಎರಡು ವರ್ಷಗಳಿಂದ ಕೆರೆಯಲ್ಲಿ ನೀರು ನಿಲ್ಲದೆ ಅಂತರ್ಜಲ ಮಟ್ಟ ಕುಸಿದಿದೆ. ಬೋರ್‌ವೆಲ್‌ಗಳಲ್ಲಿ ಸಾಕಷ್ಟು ನೀರು ಬಾರದೆ ನೀರಿನ ಟ್ಯಾಂಕರುಗಳನ್ನು ಅವಲಂಬಿಸುವಂತಾಗಿದೆ. ಇದರಿಂದ ಹೆಚ್ಚಿನ ಹಣ ಖರ್ಚು ಮಾಡಬೇಕಾಗುತ್ತಿದೆ,'' ಎಂದು ರಾಮ್ ಕುಮಾರ್ ಹೇಳಿದರು.

VK ವಿಜಯ ಕರ್ನಾಟಕ

| Date | 24-11-2020 |
| --- | --- |
| Page No | 7 |


ಮೆಜೆಸ್ಟಿಕ್‌ನಿಂದ ಮೈಸೂರು ರಸ್ತೆ ಜಂಕ್ಷನ್ ತಲುಪುವುದು ಸುಲಭ | ಟೆಂಡರ್‌ಶ್ಯೂರ್ ಕಾಮಗಾರಿ ಬಹುತೇಕ ಪೂರ್ಣ

# ಕಾಟನ್ ಪೇಟೆಯಲ್ಲಿ ಸಂಚಾರ ಸುಗಮ




## ಕಿರಿದಾದ ರಸ್ತೆ

ಟೆಂಡರ್‌ಶ್ಯೂರ್ ಕಾಮಗಾರಿಯಡಿ ಅಭಿವೃದ್ಧಿಪಡಿಸಿದ ಇತರೆ ರಸ್ತೆಗಳು ಸಾಕಷ್ಟು ಅಗಲವಾಗಿದ್ದರೆ, ಕಾಟನ್‌ಪೇಟೆ ರಸ್ತೆ ಅಭಿವೃದ್ಧಿ ಬಳಿಕವೂ ಕಿರಿದಾಗಿಯೇ ಇದೆ. ಮೊದಲಿನಂತೆಯೇ ಏಕಮುಖ ಸಂಚಾರಕ್ಕೆ ಮಾತ್ರ ಅವಕಾಶವಿದೆ. ಕಾಟನ್‌ಪೇಟೆ ರಸ್ತೆ ಅಭಿವೃದ್ಧಿಯಾದ ಬಳಿಕ ಇನ್ನಷ್ಟು ಕಿರಿದಾಗಿದೆ. ಹೀಗಾಗಿ ವಾಹನ ನಿಲುಗಡೆಗೆ ಅವಕಾಶವಿಲ್ಲ.

■ **ರವಿಕುಮಾರ ಬೆಟ್ಟದಪುರ** ಬೆಂಗಳೂರು
ravikumarb0519@gmail.com

ಟೆಂಡರ್ ಶ್ಯೂರ್ ಕಾಮಗಾರಿ ಬಳಿಕ ಕಾಟನ್ ಪೇಟೆ ಮುಖ್ಯ ರಸ್ತೆಯಲ್ಲಿ ಸಂಚಾರ ಸುಗಮವಾಗಿದೆ.

ಸುಮಾರು 20 ತಿಂಗಳು ಕಾಮಗಾರಿ ಬಳಿಕ ಈ ರಸ್ತೆಯಲ್ಲಿ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ. ಹೊಂಡಗುಂಡಿಗಳೇ ತುಂಬಿ ಸದಾ ಟ್ರಾಫಿಕ್ ಜಾಮ್ ಆಗುತ್ತಿದ್ದ ರಸ್ತೆಯಲ್ಲಿ ಇದೀಗ ಕಿರಿಕಿರಿಯಿಲ್ಲದೆ ಸಾಗಬಹುದಾಗಿದೆ. ಕಾಮಗಾರಿ ನಡೆಯುತ್ತಿದ್ದಾಗ ಮೆಜೆಸ್ಟಿಕ್‌ನಿಂದ ಮೈಸೂರು ಜಂಕ್ಷನ್‌ಗೆ ತೆರಳಲು ಓಕಳಿಪುರಂ, ಮಾಗಡಿ ರಸ್ತೆ ಅಥವಾ ಆನಂದರಾವ್ ವೃತ್ತ, ಕಾರ್ಪೊರೇಷನ್ ಮಾರ್ಗವಾಗಿ ಹಲವಾರು ಕಿ.ಮೀ. ಸುತ್ತಾಡಿ ಬರಬೇಕಿತ್ತು. ಇದೀಗ 1.15 ಕಿ.ಮೀ. ದೂರ ಸಾಗಿ ಮೈಸೂರು ರಸ್ತೆ ಜಂಕ್ಷನ್ ತಲುಪಬಹುದಾಗಿದೆ.

**ನಾನಾ ಸೌಲಭ್ಯ:** ಮಹಾತ್ಮಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ ಸೇರಿದಂತೆ ನಗರದ ಹೃದಯ ಭಾಗದ ಪ್ರಮುಖ ರಸ್ತೆಗಳಿಗೆ ಸೀಮಿತವಾಗಿದ್ದ ಅತ್ಯಾಧುನಿಕ ಸೌಲಭ್ಯಗಳು ಇದೀಗ ಕಾಟನ್ ಪೇಟೆ ರಸ್ತೆಯಲ್ಲೂ ನೋಡಬಹುದಾಗಿದೆ. ವಿಸ್ತಾರವಾದ ಪಾದಚಾರಿ ಮಾರ್ಗ ನಿರ್ಮಿಸಲಾಗಿದೆ. ಇದರಿಂದಾಗಿ ಪಾದಚಾರಿಗಳು ಕಿರಿಕಿರಿ ಇಲ್ಲದೆ ಸಾಗಬಹುದಾಗಿದೆ. ಕುಡಿಯುವ ನೀರಿನ ಪೈಪ್, ಒಳಚರಂಡಿ ಪೈಪ್ ಅಳವಡಿಕೆ, ಕೇಬಲ್ ದುರಸ್ತಿಗೆ ಕಂಡ ಕಂಡಲ್ಲಿ ರಸ್ತೆ ಅಗೆಯುವುದಕ್ಕೆ ಬ್ರೇಕ್ ಹಾಕಿ, ನೂತನ ಮಾದರಿಯ ಎಚ್‌ಡಿಪಿಇ ಡಕ್ಟ್ ನಿರ್ಮಿಸಿ ಒಂದು ಕಡೆಯಲ್ಲೇ ದುರಸ್ತಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.

## ಸುಸಜ್ಜಿತ ಪಾದಚಾರಿ ಮಾರ್ಗ ನಿರ್ಮಾಣ

## ಕೆಲ ಕಾಮಗಾರಿ ಬಾಕಿ

ಕೆಲವೆಡೆ ಡಕ್ಟ್ ನಿರ್ಮಾಣ ಪೂರ್ಣಗೊಂಡಿಲ್ಲ. ಬೀದಿ ದೀಪ ಅಳವಡಿಕೆ ಅಪೂರ್ಣವಾಗಿದೆ. ಬಿಡಾಡಿ ದನಗಳ ಸಮಸ್ಯೆಗೂ ಮುಕ್ತಿ ದೊರಕಿಲ್ಲ.

## ಸದ್ಯ ಬಸ್ ಸಂಚಾರಕ್ಕಿಲ್ಲ ಅವಕಾಶ

ಕಾಟನ್‌ಪೇಟೆ ಮುಖ್ಯರಸ್ತೆ ಇನ್ನೂ ಅಧಿಕೃತವಾಗಿ ಉದ್ಘಾಟನೆಗೊಂಡಿಲ್ಲ, ಸದ್ಯ ಬಸ್ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಬಸ್ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಲ್ಲಿ ಟ್ರಾಫಿಕ್ ಜಾಮ್ ಆಗಲಿದೆ. ಬಸ್ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕೆ ಅಥವಾ ಬೇಡವೇ ಎಂಬ ಬಗ್ಗೆ ಇನ್ನೂ ತೀರ್ಮಾನಿಸಿಲ್ಲ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಬಿಬಿಎಂಎಂಪಿ 2019ರಲ್ಲಿ ಕಾಟನ್ ಪೇಟೆ ಮುಖ್ಯ ರಸ್ತೆಯ 1.15 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು 11.71 ಕೋಟಿ ರೂ. ವೆಚ್ಚದಲ್ಲಿ ಆರಂಭ ಮಾಡಿತ್ತು. ಸುಮಾರು 20 ತಿಂಗಳ ಬಳಿಕ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಸುಸಜ್ಜಿತ ಪಾದಚಾರಿ ರಸ್ತೆ, ವಿದ್ಯುತ್, ಒಎಫ್‌ಸಿ ಕೇಬಲ್ ಅಳವಡಿಕೆಗೆ ಪ್ರತ್ಯೇಕ ಡಕ್ಟ್, ನೀರು ಸರಬರಾಜು ಕೊಳವೆ, ಒಳಚರಂಡಿ ಸಾಗಲು ಪ್ರತ್ಯೇಕ ಮಾರ್ಗ ನಿರ್ಮಿಸಲಾಗಿದೆ.

## ಟೆಂಡರ್ ಶ್ಯೂರ್ ಯೋಜನೆ ಕಾಮಗಾರಿ ವಿವರ

- ರಸ್ತೆಯ ಎರಡೂ ಬದಿಯಲ್ಲಿ 300 ಮಿ.ಮೀ. ವ್ಯಾಸದ ಒಳಚರಂಡಿ ಕೊಳವೆ ಅಳವಡಿಕೆ
- ಎರಡೂ ಬದಿಯಲ್ಲಿ 300 ಮಿ.ಮೀ. ಮತ್ತು 150 ಮಿ.ಮೀ. ವ್ಯಾಸದ ಕುಡಿಯುವ ನೀರಿನ ಕೊಳವೆ ಅಳವಡಿಕೆ
- ಬೆಸ್ಕಾಂ ಮತ್ತು ಒಎಫ್‌ಸಿ ಕೇಬಲ್‌ಗಳಿಗೆ ಎಚ್‌ಡಿಪಿಇ ಡಕ್ಟ್‌ಗಳ ಅಳವಡಿಕೆ
- ಮಳೆ ನೀರು ಚರಂಡಿಗಾಗಿ 900 ಮಿ.ಮೀ. ಕೊಳವೆ ಅಳವಡಿಕೆ.
- ರಸ್ತೆಯ ಫಥಕ್ಕೆ 180 ಮಿ.ಮೀ. ದಪ್ಪದ ವೈಟ್ ಟಾಪಿಂಗ್
- ರಸ್ತೆಯ ಉದ್ದಕ್ಕೂ ಎಲ್‌ಇಡಿ ಬೀದಿ ದೀಪ
- ಬೃಹತ್ ಮಳೆ ನೀರುಗಾಲುವೆ ಯೋಜನೆ
- ಮಳೆ ನೀರುಗಾಲುವೆಗೆ 2.0x1.6 ಮೀ. ಬಾಕ್ಸ್ ಡ್ರೈನ್ ಅಳವಡಿಕೆ
- ಬೆಂಗಳೂರು ಜಲ ಮಂಡಳಿ ಯೋಜನೆ
- ರಸ್ತೆ ಉದ್ದಕ್ಕೂ 600 ಮಿ.ಮೀ. ವ್ಯಾಸದ ಒಳಚರಂಡಿ ಕೊಳವೆ ಮಾರ್ಗ ಕಾಮಗಾರಿ
- ಕಾಟನ್‌ಪೇಟೆ ಮುಖ್ಯ ರಸ್ತೆಯಲ್ಲಿ ವಾಹನಗಳ ಸಂಚಾರ

VK ವಿಜಯ ಕರ್ನಾಟಕ

| Date | 24-11-2020 |
|---|---|
| Page No | 8 |


### ಗುತ್ತಿಗೆದಾರರಿಗೆ ಪಾಲಿಕೆಯಿಂದ 2800 ಕೋಟಿ ರೂ. ಬಾಕಿ

# ಬಾಕಿ ಹಣಕ್ಕೆ ಒತ್ತಾಯಿಸಿ ಪ್ರತಿಭಟನೆ



■ **ವಿಕ ಸುದ್ದಿಲೋಕ** ಬೆಂಗಳೂರು

ಕಳೆದ 25 ತಿಂಗಳಿನಿಂದ ಬಾಕಿ ಉಳಿಸಿಕೊಂಡಿರುವ 2,800 ಕೋಟಿ ರೂ.ಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಸದಸ್ಯರು ಪಾಲಿಕೆ ಕೇಂದ್ರ ಕಚೇರಿ ಮುಂಭಾಗ ಸೋಮವಾರ ಪ್ರತಿಭಟನೆ ನಡೆಸಿದರು.

ಜೇಷ್ಠತೆ ನಿಯಮಗಳನ್ನು ಉಲ್ಲಂಘಿಸಿ, ಲಂಚ ನೀಡಿದವರಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ. ಪಾಲಿಕೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಕಾಮಗಾರಿ ಪೂರ್ಣಗೊಳಿಸಿದ 6 ತಿಂಗಳೊಳಗೆ ಬಿಲ್ ಪಾವತಿಸಬೇಕು ಎಂದು ಆಗ್ರಹಿಸಿದರು.

''ಆಸ್ತಿ, ಒಡವೆ ಅಡವಿಟ್ಟು ಕಾಮಗಾರಿಗಳಿಗೆ ವೆಚ್ಚ ಮಾಡಲಾಗಿದೆ. ಪಾಲಿಕೆಯು 25 ತಿಂಗಳಿನಿಂದ ಹಣ ಬಿಡುಗಡೆ ಮಾಡದಿರುವುದರಿಂದ ಕುಟುಂಬ ನಿರ್ವಹಣೆ ಕಷ್ಟವಾಗಿದೆ. ಖಾಸಗಿ ಲೇವಾದೇವಿಗಾರರಿಂದ ಪಡೆದ ಸಾಲದ ಬಡ್ಡಿ ಏರುತ್ತಲೇ ಇದ್ದು, ವಾಸವಿರುವ ಮನೆಗಳನ್ನು ಮಾರಾಟ ಮಾಡಿ ಸಾಲ ಹಿಂದಿರುಗಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ,'' ಎಂದು ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದರು.

''ಪಾಲಿಕೆ ಹಣ ಬಿಡುಗಡೆ ಮಾಡದಿರುವುದರಿಂದ ಬಹುತೇಕ ಕಾಮಗಾರಿಗಳು ಅರ್ಧಕ್ಕೇ ನಿಂತಿವೆ. ಕಾಮಗಾರಿಗಳಿಗೆ ಸಿಮೆಂಟ್, ಸ್ಟೀಲ್ ಮತ್ತು ಇನ್ನಿತರೆ ಸಾಮಗ್ರಿಗಳನ್ನು ಪೂರೈಸಿದವರಿಗೆ ಬಿಲ್ ಪಾವತಿ ಮಾಡಲಾಗುತ್ತಿಲ್ಲ. ಕೂಡಲೇ ಬಾಕಿ ಹಣ ಬಿಡುಗಡೆ ಮಾಡದಿದ್ದರೆ ರಸ್ತೆ ತಡೆ ನಡೆಸಲಾಗುವುದು,'' ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನಾನಿರತರ ಮನವಿ ಆಲಿಸಿದ ಆಯುಕ್ತ ಎನ್.ಮಂಜುನಾಥ ಪ್ರಸಾದ್, ''ಮುಂದಿನ ಎರಡು ದಿನಗಳೊಳಗೆ ಸಭೆ ಕರೆದು, ಬಾಕಿ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು,'' ಎಂದು ಆಶ್ವಾಸನೆ ನೀಡಿದರು. ಬಳಿಕ ಗುತ್ತಿಗೆದಾರರು ಪ್ರತಿಭಟನೆ ಕೈಬಿಟ್ಟರು.

VK ವಿಜಯ ಕರ್ನಾಟಕ

| Date | 24-11-2020 |
| --- | --- |
| Page No | 8 |


# ಅಭಿವೃದ್ಧಿ ಹೆಸರಿನಲ್ಲಿ 2 ಕೋಟಿ ದುರುಪಯೋಗ

**ಬೆಂಗಳೂರು:** ಗೊಟ್ಟಿಗೆರೆ ವಾರ್ಡ್‌ನ ಸೌತ್ ಅವೆನ್ಯೂ ಲೇಔಟ್‌ನ ರಸ್ತೆ ಮತ್ತು ಒಳಚರಂಡಿ ಕಾಮಗಾರಿಗೆ ಅನುದಾನ ಬಿಡುಗಡೆಯಾದರೂ ಬಿಬಿಎಂಪಿ ಯಾವುದೇ ಕಾಮಗಾರಿ ಮಾಡದೆ ಹಣ ದುರುಪಯೋಗಪಡಿಸಿಕೊಂಡಿದೆ ಎಂದು ಬೆಂಗಳೂರು ನವನಿರ್ಮಾಣ ಪಕ್ಷ ದೂರಿದೆ.

''ಸೌತ್ ಅವೆನ್ಯೂ ಲೇಔಟ್‌ನ ರಸ್ತೆಗಳ ನಿರ್ವಹಣೆಗೆ ಬಿಬಿಎಂಪಿಯಿಂದ 2 ಕೋಟಿ. ರೂ. ಹಣ ಮಂಜೂರು ಮಾಡಲಾಗಿದೆ. ಆದರೂ, ಯಾವುದೇ ಕಾಮಗಾರಿ ಪ್ರಾರಂಭವಾಗಿಲ್ಲ. ಈ ಬಗ್ಗೆ ಪಾಲಿಕೆ ಮಾಜಿ ಸದಸ್ಯರನ್ನು ಭೇಟಿಯಾಗಿ ಕೇಳಿದರೆ, ಸರಕಾರದ ಬೊಕ್ಕಸದಲ್ಲಿ ಹಣವಿಲ್ಲ. ಹೀಗಾಗಿ, ಕಾಮಗಾರಿ ಕೈಗೊಳ್ಳಲಾಗುತ್ತಿಲ್ಲ ಎಂದು ಸಬೂಬು ಹೇಳುತ್ತಾರೆ. ಆದರೆ, ಈಗಾಗಲೇ ರಸ್ತೆ ನಿರ್ವಹಣೆಗೆಂದು ಬಿಡುಗಡೆಯಾಗಿರುವ ಎರಡು ಕೋಟಿ ರೂ. ಏನಾಗಿದೆ ಎಂಬುದೇ ಪ್ರಶ್ನೆಯಾಗಿದೆ. ಈ ಹಣವನ್ನು ಬಳಕೆ ಮಾಡಿರುವ ಬಗ್ಗೆ ಪಾಲಿಕೆ ಸದಸ್ಯರಾಗಲಿ, ಬಿಬಿಎಂಪಿ ಅಧಿಕಾರಿಗಳಾಗಲಿ ಮಾಹಿತಿ ನೀಡುತ್ತಿಲ್ಲ,'' ಎಂದು ಬಿಎನ್‌ಪಿ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನರಸಿಂಹನ್ ತಿಳಿಸಿದರು.

VK ವಿಜಯ ಕರ್ನಾಟಕ

| Date | 24-11-2020 |
| --- | --- |
| Page No | 8 |


# 725 ಮಂದಿಗೆ ಕೊರೊನಾ ಸೋಂಕು

| | |
| --- | --- |
| ಸೋಂಕಿತರು | 364390 |
| ಗುಣಮುಖ | 341902 |
| ಸಕ್ರಿಯ | 18409 |
| ಸಾವು | 4078 |

**ಬೆಂಗಳೂರು:** ನಗರದಲ್ಲಿ ಸೋಮವಾರ ಹೊಸದಾಗಿ 725 ಮಂದಿಗೆ ಕೊರೊನಾ ಸೋಂಕು ತಗಲಿರುವುದು ದೃಢಪಟ್ಟಿದೆ. ಕೋವಿಡ್‌ನಿಂದ ನರಳುತ್ತಿರುವವರ ಪೈಕಿ 10 ಮಂದಿ ಬಲಿಯಾಗಿದ್ದಾರೆ. ನಗರದಲ್ಲಿ ಸೋಂಕು ಪತ್ತೆ ಪ್ರಮಾಣವು ಶೇ 8.78 ಮತ್ತು ಮರಣ ದರವು ಶೇ 1.12ಕ್ಕೆ ಕುಸಿದಿದೆ. ಸದ್ಯ ಸಕ್ರಿಯ ಪ್ರಕರಣಗಳ ಪ್ರಮಾಣವು ಶೇ 5.05ರಷ್ಟಿದ್ದು, ಚೇತರಿಸಿಕೊಳ್ಳುತ್ತಿರುವವರ ಪ್ರಮಾಣವು ಶೇ 93.83ರಷ್ಟು ಏರಿಕೆಯಾಗಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 24-11-2020 |
| --- | --- |
| Page No | 2A |


## ಇ-ಆಸ್ತಿ ತಂತ್ರಾಂಶ ಅಭಿವೃದ್ಧಿ | ಮೂಲ ದಾಖಲೆ ಮಾಹಿತಿ ತಿರುಚುವುದು ಅಸಾಧ್ಯ

# 10 ಲಕ್ಷ ಆಸ್ತಿಗೆ ಡಿಜಿಟಲ್ ದಾಖಲೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯ 10 ಲಕ್ಷ ಆಸ್ತಿಗಳನ್ನು ಆಗಸ್ಟ್ ಅಂತ್ಯದೊಳಗೆ ಡಿಜಿಟಲ್ ಖಾತೆಯಾಗಿ ಬದಲಾಯಿಸಲಾಗುವುದು ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ತಿಳಿಸಿದ್ದಾರೆ.

ವಿಜಯವಾಣಿ, ದಿಗ್ವಿಜಯ 24X7 ನ್ಯೂಸ್ ಚಾನಲ್ ಆಯೋಜಿಸಿದ್ದ ನೇರ ಫೋನ್-ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಿದರು. ಆಸ್ತಿ ಖರೀದಿ, ಮಾರಾಟ, ವರ್ಗಾವಣೆ ಮಾಡುವಾಗ ತೊಂದರೆಗಳುಂಟಾಗುತ್ತಿವೆ. ಈ ಎಲ್ಲ ಸಮಸ್ಯೆಗಳ ಪರಿಹಾರಕ್ಕಾಗಿ ಇ-ಆಸ್ತಿ ತಂತ್ರಾಂಶ ಅಭಿವೃದ್ಧಿ ಮಾಡಲಾಗುತ್ತಿದೆ. ಇನ್ನೊಂದು ವಾರದಲ್ಲಿ ತಂತ್ರಾಂಶ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳಲಿದ್ದು, ನಂತರ ಸಾರ್ವಜನಿಕರಿಗೆ ಲಭ್ಯವಾಗಲಿದೆ ಎಂದು ಮಾಹಿತಿ ನೀಡಿದರು.




**ಪಾಲಿಕೆ ಬಳಿ 18 ಶಾಶ್ವತ ಪುರಾವೆಗಳು:** ಡಿಜಿಟಲ್ ಖಾತಾ ನಿರ್ಮಾಣಕ್ಕೆ ಸ್ವತಃ ಆಸ್ತಿ ಮಾಲೀಕರು 46 ಸ್ಪಷ್ಟ ಮಾಹಿತಿಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಭರ್ತಿ ಮಾಡಬಹುದಾಗಿದೆ. ಇದರಲ್ಲಿ ಆಸ್ತಿ ಮಾಲೀಕರು ಭರ್ತಿ ಮಾಡುವ 18 ಪುರಾವೆಗಳು ಪಾಲಿಕೆ ಬಳಿಯಲ್ಲಿದ್ದು, ಅವುಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದರೂ ಡಿಜಿಟಲ್ ಆಸ್ತಿ ಖಾತೆ ನಿರ್ಮಾಣ ಪೂರ್ಣಗೊಳ್ಳುವುದಿಲ್ಲ. ಕೂಡಲೆ, ಪಾಲಿಕೆ ಅಧಿಕಾರಿಗಳು ಸ್ಥಳ ಭೇಟಿ ಮಾಡಿ ಪರಿಶೀಲಿಸಿ ತಪ್ಪು ಆಗಿರುವುದನ್ನು ತಿದ್ದುಪಡಿ ಮಾಡುವಂತೆ ಸಲಹೆ ನೀಡುತ್ತಾರೆ. ಆಸ್ತಿಗಳ ಮೂಲ ದಾಖಲೆಗಳ ಮಾಹಿತಿ ಬದಲಾವಣೆ ಮಾಡಲು ಸಾಧ್ಯವಿಲ್ಲ ಎಂದು ಮಾಹಿತಿ ನೀಡಿದರು.



### ಡಿಜಿ ಲಾಕರ್ ವ್ಯವಸ್ಥೆ

ನಗರದಲ್ಲಿ ಆಸ್ತಿ ಹೊಂದಿದ ಪ್ರತಿಯೊಬ್ಬ ಮಾಲೀಕರ ಆಧಾರ್ ಕಾರ್ಡ್ ಸಂಖ್ಯೆಯ ಜೋಡಣೆಯೊಂದಿಗೆ 'ಡಿಜಿ ಲಾಕರ್' ಸೃಷ್ಟಿಸಬಹುದು. ಆಸ್ತಿ ಸಂಬಂಧಿತ ಎಲ್ಲ ಸಾಫ್ಟ್ ಕಾಪಿಗಳನ್ನು ಭದ್ರವಾಗಿಡಬಹುದು. ಡಿಜಿಟಲ್ ಆಸ್ತಿ ನಿರ್ಮಾಣ ನಂತರ ಆಸ್ತಿ ಮಾರಾಟ, ಮಾಲೀಕತ್ವ ವರ್ಗಾವಣೆ ಯಾವುದೆ ಕಾರ್ಯಕ್ಕೂ ಡಿಜಿಟಲ್ ಸಹಿ ದಾಖಲೆ ಪಡೆಯಬೇಕಾಗುತ್ತದೆ. ಹೀಗಾಗಿ ಅನಧಿಕೃತ ಮಾರಾಟ, ಸುಳ್ಳು ದಾಖಲೆ ಸೃಷ್ಟಿ ಸೇರಿ ಯಾವುದೆ ಭ್ರಷ್ಟಾಚಾರವನ್ನು ತಡೆಯಬಹುದಾಗಿದೆ ಎಂದರು.

### ಡಿಜಿಟಲ್ ಆಸ್ತಿ ಬಗ್ಗೆ ಜಾಗೃತಿ

**ಬಿಬಿಎಂಪಿ ವ್ಯಾಪ್ತಿಯಲ್ಲಿ ಮೊದಲ ಹಂತದಲ್ಲಿ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯ ಸೇರಿ ಕೇಂದ್ರ ಭಾಗದ 100 ವಾರ್ಡ್‌ಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ಬಗ್ಗ ಸಾರ್ವಜನಿಕರು ಆಸ್ತಿ ಮಾಹಿತಿ ಭರ್ತಿ ಮಾಡುವಂತೆ ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಜಾಹೀರಾತು ನೀಡಲಾಗುವುದು. ಜನರು, ಸಂಪೂರ್ಣ ಮಾಹಿತಿ ತಿಳಿದುಕೊಂಡು ಪಾಲಿಕೆಯೊಂದಿಗೆ ಕೈಜೋಡಿಸಿದಲ್ಲಿ ಆಸ್ತಿಗಳ ನಿರ್ವಹಣೆ ತುಂಬಾ ಸರಳವಾಗಲಿದೆ. ಮಾಲೀಕರು ತಮ್ಮ ಆಸ್ತಿ ದಾಖಲೆ ಬೇಕೆಂದಾಗ ಪಾಲಿಕೆ ಇ-ತಂತ್ರಾಂಶದಲ್ಲಿ 125 ರೂ. ಪಾವತಿಸಿ ಮುದ್ರಣ ಪಡೆಯಬಹದುದಾಗಿದೆ ಎಂದು ಮಾಹಿತಿ ನೀಡಿದರು.**

# ಅಭಿವೃದ್ಧಿ ಕಾರ್ಯಗಳ ಪ್ರಗತಿಗೆ ಸಮನ್ವಯ ಸಭೆಯೇ ಮದ್ದು

**ಬೆಂಗಳೂರು:** ನಗರದ ಮೂಲ ಸೌಕರ್ಯ ಒದಗಿಸುವ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ಪ್ರತಿ 15 ದಿನಗಳಿಗೊಮ್ಮೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಸಮನ್ವಯ ಸಭೆ ನಡೆಸುತ್ತಾರೆ. ಈ ಮೂಲಕ ಎಲ್ಲ ಅಭಿವೃದ್ಧಿ ಕಾರ್ಯಗಳ ಪ್ರಗತಿಗೆ ಹಾದಿ ಮಾಡಿಕೊಟ್ಟಿದ್ದಾರೆ.

» **ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ 15 ದಿನಕ್ಕೊಮ್ಮೆ ಸಭೆ**

ಬಿಬಿಎಂಪಿ ವ್ಯಾಪ್ತಿ ಬೃಹತ್ ಆಗಿದ್ದು, 1.20 ಕೋಟಿ ಜನರು ವಾಸಿಸುತ್ತಿದ್ದಾರೆ. ಎಲ್ಲ ವಿಭಾಗದಲ್ಲಿ ಮೂಲ ಸೌಕರ್ಯ ಒದಗಿಸಲು ಬಿಬಿಎಂಪಿ, ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ ಸೇರಿ ವಿವಿಧ ಇಲಾಖೆಗಳು ಕಾರ್ಯನಿರ್ವಹಿಸುತ್ತಿವೆ. ಆದರೆ, ಕೆಲವೊಂದು ಕಾರ್ಯಗಳಲ್ಲಿ ಸಮನ್ವಯ ಕೊರತೆಯಿಂದ ಕಾಮಗಾರಿಗೆ ಹಿನ್ನಡೆಯಾಗುವ ಸಾಧ್ಯತೆಗಳಿವೆ. ಹೀಗಾಗಿ, 15 ದಿನಗಳಿಗೊಮ್ಮೆ ನಗರದ ಹಲವು ಇಲಾಖೆಗಳ ಹಿರಿಯ ಐಎಎಸ್ ಅಧಿಕಾರಿಗಳೊಂದಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಸಭೆನಡೆಸುತ್ತಾರೆ. ಇಲ್ಲಿ ಯಾವುದೇ ಸಮಸ್ಯೆಗಳಿದ್ದರೂ, ಪರಿಹರಿಸಿಕೊಂಡು ಕಾರ್ಯ ಪ್ರಗತಿಗೆ ಸೂಚಿಸುತ್ತಾರೆ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥಪ್ರಸಾದ್ ಮಾಹಿತಿ ನೀಡಿದರು.

ಸಮನ್ವಯ ಸಭೆಯಲ್ಲಿ ಮೊದಲನೆಯದಾಗಿ ಟ್ರಾಫಿಕ್ ಪೊಲೀಸ್ ವಿಭಾಗದ ಅಧಿಕಾರಿಗಳು ರಸ್ತೆ ಗುಂಡಿ, ಬೀದಿ ದೀಪಗಳು, ಪಾದಚಾರಿ ಮಾರ್ಗ, ಮಾರುಕಟ್ಟೆಗಳು, ಮ್ಯಾನ್ ಹೋಲ್, ಟ್ರಾಫಿಕ್ ಸೇರಿ ಎಲ್ಲದರ ಬಗ್ಗೆ ಮಾಹಿತಿ ನೀಡುತ್ತಾರೆ. ನಂತರ ವಿವಿಧ ಇಲಾಖೆಗಳಿಂದ ಸಮಸ್ಯೆಗಳ ಪರಿಹಾರಕ್ಕೆ ಇರುವ ಅಡ್ಡಿಗಳನ್ನು ತಿಳಿದುಕೊಂಡು ಬಿಬಿಎಂಪಿ, ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ, ಪೊಲೀಸ್ ಇಲಾಖೆ, ಮೆಟ್ರೋ ಸೇರಿ ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಸಲಹೆ ಸೂಚನೆ ನೀಡುತ್ತಾರೆ. ಹೀಗಾಗಿ, ಸಮನ್ವಯದಿಂದ ಕಾಮಗಾರಿಗಳಿಗೆ ಕೆಲವು ದಿನಗಳಿಂದ ಚುರುಕುಗೊಂಡಿವೆ ಎಂದು ತಿಳಿಸಿದರು.

| Date | 24-11-2020 |
|---|---|
| Page No | 3 |

# 24 ಗಂಟೆಗಳಲ್ಲಿ 1,509 ಮಂದಿಗೆ ಕರೋನಾ

**ಬೆಂಗಳೂರು:** ಕಳೆದ 24 ಗಂಟೆಗಳಲ್ಲಿ ರಾಜ್ಯದಲ್ಲಿ 1,509 ಕರೋನಾ ಪ್ರಕರಣಗಳು ಪತ್ತೆಯಾಗಿದ್ದು, 1,645 ಜನ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಒಟ್ಟು 24 ಮಂದಿ ಮೃತಪಟ್ಟಿದ್ದಾರೆ. ಒಟ್ಟು ಸೋಂಕಿತರ ಸಂಖ್ಯೆ 8,74,555ಕ್ಕೆ ಏರಿಕೆಯಾಗಿದೆ. ಈ ಪೈಕಿ 8,38,150 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಪ್ರಸ್ತುತ 24,708 ಸಕ್ರಿಯ ಪ್ರಕರಣಗಳಿವೆ. ಇಲ್ಲಿಯವರೆಗೆ ಒಟ್ಟು 11,678 ಮಂದಿ ಸೋಂಕಿಗೆ ಮೃತಪಟ್ಟಿದ್ದು, 438 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಭಾನುವಾರ 1,704 ಮಂದಿಗೆ ಸೋಂಕು ತಗುಲಿತ್ತು. ಒಟ್ಟು 8,682 ಆಂಟಿಜನ್ ಟೆಸ್ಟ್, 87,413 ಆರ್‌ಟಿಪಿಸಿಆರ್ ಇತ್ಯಾದಿ ಪರೀಕ್ಷೆ ಮಾಡಿದ್ದು, ಒಟ್ಟು 96,095 ಕರೋನಾ ಪರೀಕ್ಷೆ ಮಾಡಲಾಗಿದೆ. ಇಲ್ಲಿಯವರೆಗೆ ರಾಜ್ಯದಲ್ಲಿ ಒಟ್ಟು 1,03,29,473 ಕರೋನಾ ಪರೀಕ್ಷೆಗಳನ್ನು ಮಾಡಲಾಗಿದೆ. ಬೆಂಗಳೂರು ನಗರದಲ್ಲಿ 725 ಮಂದಿಗೆ ಸೋಂಕು ಬಂದಿದ್ದು, 10 ಮಂದಿ ಮೃತಪಟ್ಟಿದ್ದಾರೆ. ಮೈಸೂರು 104, ತುಮಕೂರು 89, ಮಂಡ್ಯ 58, ಕಲಬುರಗಿಯಲ್ಲಿ 56 ಜನರಲ್ಲಿ ಸೋಂಕು ಪತ್ತೆಯಾದರೆ, ಹಾಸನ 39, ಕೋಲಾರದಲ್ಲಿ 35 ಬೆಂಗಳೂರು ಗ್ರಾಮಾಂತರ ಹಾಗೂ ಬಳ್ಳಾರಿಯಲ್ಲಿ 34 ಹಾಗೂ ಉತ್ತರ ಕನ್ನಡದಲ್ಲಿ 30 ಮಂದಿಗೆ ಸೋಂಕು ಬಂದಿದೆ.

ಉದಯವಾಣಿ
ಜನಮನದ ಜೀವನಾಡಿ

| Date | 24-11-2020 |
| --- | --- |
| Page No | 3 |

# ಹಾಸಿಗೆ ನೀಡಲು ಆತಂಕ ಸೃಷ್ಟಿಸಿದ ಎರಡನೇ ಅಲೆ

## ಇಕ್ಕಟ್ಟಿಗೆ ಸಿಲುಕಿರುವ ಆರೋಗ್ಯ ಇಲಾಖೆ । ಕೊರೊನಾ ಇಳಿಕೆ ಹಾಸಿಗೆ ಪರಿವರ್ತನೆಗೆ ಕಾಯುತ್ತಿರುವ ಆಸ್ಪತ್ರೆಗಳು

• ಜಯಪ್ರಕಾಶ್ ಬಿರಾದಾರ್

**ಬೆಂಗಳೂರು:** ಕೊರೊನಾ ಎರಡನೇ ಅಲೆಯ ಆತಂಕ ರಾಜಧಾನಿಯಲ್ಲಿ ಕೊರೊನಾ ಸೋಂಕು ನಿರ್ವಹಣೆ ಮಾಡುತ್ತಿರುವ ಆರೋಗ್ಯ ಇಲಾಖೆ ಮತ್ತು ಬಿಬಿಎಂಪಿ ಅಧಿಕಾರಿಗಳನ್ನು ಅಕ್ಷರಶಃ ಇಕ್ಕಟ್ಟಿಗೆ ಸಿಲುಕಿಸಿದೆ !

ಕೊರೊನಾ ಸೋಂಕಿತರಿಗೆ ಮೀಸಲಿಟ್ಟ ಹಾಸಿಗೆಗಳ ಪೈಕಿ ಖಾಲಿ ಉಳಿದಿರುವ ಶೇ.70 ರಷ್ಟು ಹಾಸಿಗೆಗಳಲ್ಲಿ ಒಂದಿಷ್ಟನ್ನು ಇತರೆ ರೋಗಿಗಳಿಗೆ ಬಿಟ್ಟುಕೊಡಬೇಕಾ? ಅಥವಾ ಸೋಂಕಿನ ಎರಡನೇ ಅಲೆ ಅಪ್ಪಳಿಸಬಹುದು ಎಂದು ಮುಂಜಾಗ್ರತಾ ಕ್ರಮವಾಗಿ ಕಾಯ್ದಿರಿಸಿಕೊಳ್ಳಬೇಕಾ? ಎಂಬ ಗೊಂದಲ ಉಂಟಾಗಿದೆ.

ಇದರ ನಡುವೆಯೇ ಕೊರೊನೇತರ ರೋಗಿಗಳು ನಗರದ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ, ಐಸಿಯು ಹಾಸಿಗೆ ಲಭ್ಯವಾಗದೇ ಪರದಾಡುತ್ತಿದ್ದಾರೆ.

**ಅಪಖ್ಯಾತಿಗೆ ಗುರಿಯಾಗಿದ್ದ ಬೆಂಗಳೂರು:** ದೆಹಲಿ, ಮುಂಬೈ, ಅಹಮದಾಬಾದ್, ಜೈಪುರ್, ಜೋಧ್‌ಪುರ್, ಭೋಪಾಲ್, ಇಂದೋರ್ ಸೇರಿದಂತೆ ಉತ್ತರ ಭಾರತದ ಮಹಾನಗರಗಳಲ್ಲಿ ಈಗಾಗಲೇ ಕೊರೊನಾ ಹೊಸ ಪ್ರಕರಣಗಳು ಮತ್ತೆ ಏರಿಕೆಯಾಗಿವೆ. ದೆಹಲಿ ಯಲ್ಲಿ ಕೊರೊನಾ ಮೂರನೇ ಅಲೆ, ಇತರೆಡೆ ಎರಡನೇ ಅಲೆ ಆರಂಭವಾಗಿದೆ. ಕಳೆದ ತಿಂಗಳ ಹಿಂದಷ್ಟೇ ದೇಶದಲ್ಲಿಯೇ ಅತ್ಯಂತ ಹೆಚ್ಚು ಪ್ರಕರಣಗಳು ವರದಿಯಾಗುವ ಮೂಲಕ ಕೊರೊನಾ ರಾಷ್ಟ್ರ ರಾಜಧಾನಿ ಎಂಬ ಅಪಖ್ಯಾತಿಗೆ ಬೆಂಗಳೂರು ಗುರಿಯಾಗಿತ್ತು.

ಸದ್ಯ ಇಲ್ಲಿ ಕೊರೊನಾ ಪ್ರಕರಣಗಳು ಗರಿಷ್ಠ 5,200 ದಿಂದ ಒಂದು ಸಾವಿರದ ಆಸುಪಾಸಿಗೆ ಇಳಿಕೆಯಾಗಿವೆ. ಆದರೆ, ಇತರೆ ಮಹಾನಗರಗಳಂತೆ ಇಲ್ಲಿಯೂ ಎರಡನೇ ಅಲೆ ಅಪ್ಪಳಿಸಿದರೆ ಈ ಹಿಂದಿನಂತೆಯೇ ಹಾಸಿಗೆ, ವೈದ್ಯಕೀಯ ಸಿಬ್ಬಂದಿ ಸೇರಿದಂತೆ ಇತರೆ ಸೌಲಭ್ಯಗಳು ಬೇಕಾಗುತ್ತದೆ. ಹೀಗಾಗಿ, ಸದ್ಯ ಖಾಲಿ ಉಳಿಸಿರುವ ಶೇ.70 ರಷ್ಟು ಹಾಸಿಗೆಗಳನ್ನು ಇತರೆ ರೋಗಿಗಳಿಗೆ ಬಳಸಿಕೊಳ್ಳಲು ಅನುಮತಿ ನೀಡಬೇಕೋ ಅಥವಾ ಎರಡನೇ ಅಲೆಗೆ ಮೀಸಲಿಡಬೇಕೋ ಎಂಬ ಗೊಂದಲದಲ್ಲಿ ಆರೋಗ್ಯ ಇಲಾಖೆ, ಬಿಬಿಎಂಪಿ ಇದೆ.



**ಅನುಮತಿಗೆ ಕಾಯುತ್ತಿವೆ ಆಸ್ಪತ್ರೆಗಳು:** ವಿಕ್ಟೋರಿಯಾ (ಪೂರ್ಣ ಪ್ರಮಾಣ), ಕೆ.ಸಿ. ಜನರಲ್, ಬೌರಿಂಗ್ ಮತ್ತು ಲೇಡಿ ಕರ್ಜನ್, ಜಯನಗರ ಜನರಲ್ ಹಾಗೂ ರಾಜೀವ್‌ಗಾಂಧಿ ಆಸ್ಪತ್ರೆಗಳಲ್ಲಿ ಬಹುತೇಕ ಹಾಸಿಗಳು ಕೊರೊನಾ ಸೋಂಕಿತರಿಗೆ ಮೀಸಲಿಡಲಾಗಿದೆ. ಸದ್ಯ ಸೋಂಕು ಕಡಿಮೆಯಾದ ಹಿನ್ನೆಲೆ ಮೀಸಲಿಟ್ಟಿರುವ ಹಾಸಿಗೆಗಳ ಪೈಕಿ ಒಂದಿಷ್ಟನ್ನು ಕೊರೊನೇತರರಿಗೆ ಮೀಸಲಿಡಲು ಆಸ್ಪತ್ರೆಗಳು ಸಿದ್ಧವಿದೆ. ಈ ಕುರಿತು ಸರ್ಕಾರ ಅನುಮತಿಗೆ ಕಾಯುತ್ತಿದ್ದೇವೆ ಎಂದು ಆಸ್ಪತ್ರೆ ಮುಖ್ಯಸ್ಥರು 'ಉದಯವಾಣಿ'ಗೆ ತಿಳಿಸಿದ್ದಾರೆ.

**ಐಸಿಯು ಹಾಸಿಗೆ ಸಿಗದೆ ಸಮಸ್ಯೆ:** ನಗರದ ಆಸ್ಪತ್ರೆಗಳಲ್ಲಿ ಕೊರೊನಾ ಸೋಂಕಿತರಿಗೆ ಬಹುತೇಕ ಐಸಿಯು ಹಾಸಿಗೆಗಳನ್ನು ಮೀಸಲಿಡಲಾಗಿದೆ. ಬೆರಳೆಣಿಕೆಯಷ್ಟು ಹಾಸಿಗೆಗಳು ಮಾತ್ರ ಇತರೆ ರೋಗಿಗಳಿಗಿವೆ. ಪ್ರಮುಖವಾಗಿ ಕೆಸಿ ಜನರಲ್ಲಿನಲ್ಲಿ ಆರು, ಬೌರಿಂಗ್ ಹತ್ತು ಇದ್ದರೆ ವಿಕ್ಟೋರಿಯಾದಲ್ಲಿ ಎಲ್ಲಾ ಹಾಸಿಗೆ ಕೊರೊನಾಗೆ ಸೀಮಿತ. ಇದರಿಂದಾಗಿ ಬೆಂಗಳೂರು ಸೇರಿದಂತೆ ಸುತ್ತಮುತ್ತಲ ಪ್ರದೇಶದಿಂದ ಜನರು ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳು ಸಿಗದೆ ಸಮಸ್ಯೆ ಎದುರಿಸುತ್ತಿದ್ದಾರೆ. ಪ್ರಮುಖವಾಗಿ ಅಪಘಾತ, ಹೃದಯಾಘಾತ, ಪಾರ್ಶ್ವವಾಯು, ಮೂತ್ರಪಿಂಡ ವೈಫಲ್ಯ ಸಮಸ್ಯೆ ಹೊಂದಿರುವವರು ಐಸಿಯು ಹಾಸಿಗೆ ಸಿಗದೆ ಪರದಾಟ ನಡೆಸುತ್ತಿದ್ದಾರೆ.

**ಲೋಕಾರ್ಪಣೆಗೆ ಕಾದಿವೆ ತುರ್ತು ನಿಗಾ ಘಟಕಗಳು:** ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಕೊರೊನಾ ಮತ್ತು ಕೊರೊನೇತರ ಚಿಕಿತ್ಸೆಗಾಗಿ ಒಟ್ಟು 100 ಹಾಸಿಗೆಗಳ ತುರ್ತು ನಿಗಾ ಘಟಕ (ಐಸಿಯು) ನೂತನವಾಗಿ ನಿರ್ಮಿಸಲಾಗಿದೆ. ಕಾಮಗಾರಿ ಪೂರ್ಣಗೊಂಡ ಕೆಲ ವಾರಗಳು ಕಳೆದಿದ್ದರೂ ಲೋಕಾರ್ಪಣೆಗೊಂಡಿಲ್ಲ. ನಗರದಲ್ಲೀಗ ಐಸಿಯು ಹಾಸಿಗೆಗಳ ಕೊರತೆ ಇದ್ದು, ಶೀಘ್ರ ಈ ಘಟಕಗಳನ್ನು ಆರಂಭಿಸಿದರೆ ಅನುಕೂಲವಾಗಲಿದೆ. 'ಸದ್ಯ ಆಸ್ಪತ್ರೆಯಲ್ಲಿ ಕೇವಲ ಆರು ಐಸಿಯು ಹಾಸಿಗೆಗಳಿದ್ದು, ಹೊಸ ಘಟಕಗಳ ಉದ್ಘಾಟನೆ ಬಾಕಿ ಇದ್ದು, ಶೀಘ್ರ ಕ್ರಮಕೈಗೊಳ್ಳಲಾಗುವುದು' ಎಂದು ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

---

ನಗರದಲ್ಲಿ ಸೋಂಕಿತರಿಗೆ ಮೀಸಲಿಟ್ಟ ಹಾಸಿಗೆಗಳ ಪೈಕಿ ಒಂದಿಷ್ಟನ್ನು ಇತರೆ ರೋಗಿಗಳಿಗೆ ನೀಡಬೇಕಿದೆ. ಇದರ ಜತೆಗೆ ಮತ್ತೆ ಕೊರೊನಾ ಏರಿಕೆಯಾಗುವ ಆತಂಕವಿದ್ದು, ವಾರ ಕಾಯ್ದು ನೋಡಿ ನಂತರ ಅಗತ್ಯ ಕ್ರಮಕೈಗೊಳ್ಳಲಾಗುವುದು.

• ಡಾ.ಓಂ ಪ್ರಕಾಶ್ ಪಾಟೀಲ್, ನಿರ್ದೇಶಕರು, ಆರೋಗ್ಯ ಇಲಾಖೆ

ವಿಕ್ಟೋರಿಯಾದಲ್ಲಿ ಪೂರ್ಣ ಪ್ರಮಾಣದಲ್ಲಿ ಕೊರೊನಾ ಸೋಂಕಿತರಿಗೆ ಚಿಕಿತ್ಸೆಯೇ ನೀಡಲಾಗುತ್ತಿದೆ. ಇತರೆ ರೋಗಿಗಳಿಗೆ ಚಿಕಿತ್ಸೆ ಆರಂಭಿಸುವ ಕುರಿತು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಅನುಮತಿ ಸಿಕ್ಕರೆ ಕೂಡಲೇ ಆರಂಭಿಸುತ್ತೇವೆ.

• ಡಾ.ಜಯಂತಿ, ಡೀನ್ ಬೆಂಗಳೂರು ವೈದ್ಯಕೀಯ ಕಾಲೇಜು.

ಸದ್ಯ 50 ಹಾಸಿಗಳನ್ನು ಇತರೆ ರೋಗಿಗಳಿಗೆ ನೀಡಲಾಗಿದೆ. ಇನ್ನು 60 ಹಾಸಿಗೆಗಳನ್ನು ನೀಡಲು ಸಿದ್ಧವಿದ್ದು, ಸರ್ಕಾರದ ಅನುಮತಿಗೆ ಕಾಯುತ್ತಿದ್ದೇವೆ. ಇದರಿಂದ ಇತರೆ ರೋಗಿಗಳಿಗೂ ಅನುಕೂಲವಾಗಲಿದೆ.

• ಡಾ.ಮನೋಜ್, ನಿರ್ದೇಶಕರು, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ.

ತಾಯಿಗೆ ಪಾರ್ಶ್ವವಾಯು ಆಗಿದ್ದು, ಹಾಸಿಗೆ ಸಿಗದೆ ಪರದಾಟ ನಡೆಸಿದ್ದೇವೆ. ವಿಕ್ಟೋರಿಯಾದಲ್ಲಿ ಇತರೆ ರೋಗಿಗಳಿಗೆ ಚಿಕಿತ್ಸೆ ಇಲ್ಲ. ಕೆ.ಸಿ. ಜನರಲ್, ನಿಮ್ಹಾನ್ಸ್, ಬೌರಿಂಗ್‌ನಲ್ಲಿ ಹಾಸಿಗೆ ಇಲ್ಲ. ತುರ್ತು ಚಿಕಿತ್ಸೆ ನಂತರ ಆ್ಯಂಬುಲೆನ್ಸ್‌ನಲ್ಲಿಯೇ ರಾತ್ರಿ ಕಳೆದು ಬೆಳಗ್ಗೆ ಹಣ ಹೊಂದಿಸಿಕೊಂಡು ಖಾಸಗಿ ಆಸ್ಪತ್ರೆ ದಾಖಲಿಸಿದ್ದೇವೆ.

• ಅಂಜನ್ ಕುಮಾರ್, ರೋಗಿ ಸಂಬಂಧಿ

| ಆಸ್ಪತ್ರೆಗಳ ಹೆಸರು | ಒಟ್ಟು ಹಾಸಿಗಳು | ಸೋಂಕಿತರಿಗೆ (ಐಸಿಯು) | ಸಾರಿ | ಕೊರೊನೇತರರಿಗೆ (ಐಸಿಯು) |
| --- | --- | --- | --- | --- |
| ಕೆ.ಸಿ.ಜನರಲ್ | 300 | 100(0) | 50 | 150(6) |
| ಜಯನಗರದ ಜನರಲ್ | 300 | 125(0) | 20 | 100(10) |
| ವಿಕ್ಟೋರಿಯಾ | 550 | 142(75) | 100 | 0 |
| ಬೌರಿಂಗ್ ಮತ್ತು ಲೇಡಿ ಕರ್ಜನ್ | 1040 | 165(35) | 30 | 50(10) |
| ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ | 470 | 126(24) | 46 | 200(10) |

### ಕೊರೊನಾ: ಒಂದೆರಡು ಆಸ್ಪತ್ರೆಗೆ ಸೀಮಿತಗೊಳಿಸಿ

ನಗರದ 18 ಸರ್ಕಾರಿ ಆಸ್ಪತ್ರೆ, 3 ವೈದ್ಯಕೀಯ ಕಾಲೇಜುಗಳಲ್ಲಿ ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಇದಕ್ಕಾಗಿಯೇ 1,553 ಹಾಸಿಗೆಗಳನ್ನು ಮೀಸಲಿಟ್ಟಿದೆ. ಈ ಪೈಕಿ ಶೇ 30 ರಷ್ಟು ಹಾಸಿಗೆಗಳು ಮಾತ್ರ ಭರ್ತಿಯಾಗಿವೆ. ಅಲ್ಲದೆ, ಹೊಸ ಪ್ರಕರಣಗಳು ಒಂದು ಸಾವಿರಕ್ಕೆ ಇಳಿಕೆಯಾಗಿದ್ದು, ಈ ಪೈಕಿ ಶೇ.20 ರಷ್ಟು ಸೋಂಕಿತರು ಮಾತ್ರ ಆಸ್ಪತ್ರೆ ದಾಖಲಾಗುತ್ತಿದ್ದಾರೆ ಎಂದು ಬಿಬಿಎಂಪಿ ಹೇಳುತ್ತಿದೆ. ಹೀಗಾಗಿ, ಕೊರೊನಾ ಚಿಕಿತ್ಸೆಗೆ ಒಂದೆರಡು ಆಸ್ಪತ್ರೆಯನ್ನು ಮೀಸಲಿಟ್ಟು, ಉಳಿದ ಆಸ್ಪತ್ರೆಗಳಲ್ಲಿ ಸಾಮಾನ್ಯ ಚಿಕಿತ್ಸೆ ಆರಂಭಿಸಿ ಎಂಬ ಕೂಗು ಸಾರ್ವಜನಿಕರಿಂದ ವ್ಯಕ್ತವಾಗುತ್ತಿದೆ.

### ಒಮ್ಮೆಗೆ ಪರಿವರ್ತನೆ ಕಷ್ಟ

ಮೀಸಲಿಟ್ಟ ಹಾಸಿಗೆಗಳನ್ನು ತಕ್ಷಣದಿಂದಲೇ ಇತರೆ ರೋಗಿಗಳಿಗೆ ಬಳಸಬಹುದು. ಒಂದು ವೇಳೆ ನಗರದಲ್ಲಿ ಸೋಂಕು ಹೆಚ್ಚಾಗಿ, ಒಮ್ಮೆಗೆ ಹೆಚ್ಚಿನ ಹಾಸಿಗೆ ಬೇಡಿಕೆ ಬಂದರೆ ಪೂರೈಸುವುದು ಕಷ್ಟವಾಗುತ್ತದೆ. ಸಿಬ್ಬಂದಿ, ಸಲಕರಣೆ ಜೋಡಣೆ, ದಾಖಲಾಗಿರುವ ಇತರೆ ರೋಗಿಗಳ ಸ್ಥಳಾಂತರ ಅಥವಾ ಪೂರ್ಣ ಚಿಕಿತ್ಸೆ ನೀಡದೆ ತುರ್ತು ಬಿಡುಗಡೆ ಮಾಡಬೇಕಾಗುತ್ತದೆ. ಒಂದಿಷ್ಟು ಸಮಯ ಕಾದುನೋಡುವುದು ಉತ್ತಮ ಎನ್ನುವುದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಅಭಿಪ್ರಾಯವಾಗಿದೆ.

ಸಂಯುಕ್ತ ಕರ್ನಾಟಕ

| Date | 24-11-2020 |
| --- | --- |
| Page No | 2 |


# 775 ಮಂದಿಗೆ ಕೊರೊನಾ

**ಸಂ.ಕ.ಸಮಾಚಾರ ಬೆಂಗಳೂರು**

ರಾಜಧಾನಿಯಲ್ಲಿ ಸೋಮವಾರ 775 ಹೊಸ ಕೊರೊನಾ ಸೋಂಕಿತರು ಪತ್ತೆಯಾಗಿದ್ದಾರೆ.

ಇನ್ನು ಸಾವು–ನೋವಿನ ಪ್ರಮಾಣದಲ್ಲಿ ಕೊಂಚ ಹೆಚ್ಚಳವಾಗಿದ್ದು ಕಳೆದ 24 ಗಂಟೆಗಳಲ್ಲಿ ಬೆಂಗಳೂರಿನ 10 ಮಂದಿ ಕೊರೊನಾಗೆ ಬಲಿಯಾಗಿದ್ದಾರೆ.

478 ಸೋಂಕಿತರು ಸೇರಿದಂತೆ ಒಟ್ಟು 1,645 ಮಂದಿ ಗುಣಮುಖರಾಗಿ ಆಸ್ಪತ್ರೆಗಳಿಂದ ಬಿಡುಗಡೆ ಹೊಂದಿದ್ದಾರೆ.

ಬೆಂಗಳೂರೊಂದರಲ್ಲೇ ಸೋಂಕಿತರ ಸಂಖ್ಯೆ 3,64,390ಕ್ಕೆ ಏರಿದೆ. ಗುಣಮುಖರ ಸಂಖ್ಯೆ 3,41,902ಕ್ಕೆ ತಲುಪಿದೆ. ಇಲ್ಲಿಯವರೆಗೆ ಕೊರೊನಾಕ್ಕೆ ಬಲಿಯಾದ ಬೆಂಗಳೂರು ನಿವಾಸಿಗಳ ಸಂಖ್ಯೆ 4078ಕ್ಕೆ ಏರಿದೆ. ರಾಜ್ಯದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಮತ್ತಷ್ಟು ಕಡಿಮೆಯಾಗಿದ್ದು 1,509 ಜನರಿಗೆ ಸೋಂಕು ದೃಢಪಟ್ಟಿದೆ. ಕಳೆದ 24 ಗಂಟೆಗಳಲ್ಲಿ ಬೆಂಗಳೂರಿನ 10 ಮಂದಿ ಸೋಂಕಿತರು ಸೇರಿದಂತೆ ಒಟ್ಟು 24 ಜನ ಕೊರೊನಾಕ್ಕೆ ಜೀವ ಕಳೆದುಕೊಂಡಿದ್ದಾರೆ.

ಇಲ್ಲಿಯವರೆಗೆ ಕೊರೊನಾ ಸೋಂಕಿತರ ಒಟ್ಟು ಸಂಖ್ಯೆ 8,74,555ಕ್ಕೆ ಏರಿಕೆಯಾಗಿದ್ದರೆ, ಒಟ್ಟು ಗುಣಮುಖರ ಸಂಖ್ಯೆ 8,38,150ಕ್ಕೆ ತಲುಪಿದೆ. ಇನ್ನುಳಿದಂತೆ 24,708 ಸೋಂಕಿತರು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮುಂದುವರಿಸಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಸಂಯುಕ್ತ ಕರ್ನಾಟಕ

| Date | 24-11-2020 |
|---|---|
| Page No | 3 |


### ನದಿಗೆ ವಿಷಕಾರಿ ಅಂಶಗಳು । ಕ್ರಮಕೈಗೊಳ್ಳದ ಮಾಲಿನ್ಯ ನಿಯಂತ್ರಣ ಮಂಡಳಿ

# ಕಾರ್ಖಾನೆ ತ್ಯಾಜ್ಯ ಸಂಸ್ಕರಣೆಗಿಲ್ಲ ಘಟಕ

**ಸಂ.ಕ.ಸಮಾಚಾರ ಬೆಂಗಳೂರು**

ರಾಜ್ಯದಲ್ಲಿ ದಿನೇದಿನೇ ಕೈಗಾರಿಕೆಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದರೂ ಸಹ ಕಾರ್ಖಾನೆಗಳಿಂದ ಹೊರಬರುವ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ಸಂಸ್ಕರಣಾ ಘಟಕಗಳ ಕೊರತೆ ಎದ್ದು ಕಾಣುತ್ತಿದೆ.

ರಾಜ್ಯದಲ್ಲಿ ಈಗ ಸಾವಿರಾರು ಉದ್ದಿಮೆಗಳು ಕಾರ್ಯನಿರ್ವಹಿಸುತ್ತಿವೆ. ಲಕ್ಷಾಂತರ ಮಂದಿ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಐಟಿ-ಬಿಟಿ ಹೊರತುಪಡಿಸಿದರೆ ಬಹುತೇಕ ಕಂಪನಿಗಳು ಹೊರಬಿಡುವ ತ್ಯಾಜ್ಯದ ನೀರು ಸಂಸ್ಕರಣೆಯಾಗುತ್ತಿಲ್ಲ. ಇದರಿಂದ ತ್ಯಾಜ್ಯ ನೀರು ಮಳೆನೀರು ಗಾಲುವೆ ಮೂಲಕ ಕೆರೆಗಳನ್ನು ಸೇರ್ಪಡೆಯಾಗುತ್ತಿದೆ.


(ಸಾಂದರ್ಭಿಕ ಚಿತ್ರ)

ಮಾಲಿನ್ಯ ನಿಯಂತ್ರಣ ಮಂಡಳಿ 2018-19ರ ವರದಿ ಪ್ರಕಾರ ಕೇವಲ 11 ಸಂಸ್ಕರಣಾ ಘಟಕ ಕಾರ್ಯನಿರ್ವಹಿಸುತ್ತಿವೆ. ಇದರ ವರದಿ ಪ್ರಕಾರ, ನಿತ್ಯ ರಾಜ್ಯದಲ್ಲಿ ಸಾಮೂಹಿಕ ಕಲುಷಿತ ನೀರು ಶುದ್ಧೀಕರಣ ಘಟಕಗಳ ಸ್ಥಾವರಗಳು ನಿತ್ಯ 7,375 ಕೆಜಿ ಕಲುಷಿತ ನೀರನ್ನು ಸಂಸ್ಕರಣೆ ಮಾಡುವ ಸಾಮರ್ಥ್ಯ ಹೊಂದಿವೆ ಎಂದು ಉಲ್ಲೇಖಿಸಿತ್ತು. ಇನ್ನು ಕೆಲ ದೊಡ್ಡ ಪ್ರಮಾಣದ ಕೈಗಾರಿಕೆಗಳಲ್ಲಿ ಸಂಸ್ಕರಣಾ ಘಟಕ ಇವೆ. ಆದರೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಸಂಸ್ಕರಣಾ ಘಟಕ ಇರುವುದಿಲ್ಲ. ನಗರದಲ್ಲಿ 50 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕಾ ಪ್ರದೇಶಗಳಾದ ಪೀಣ್ಯ, ರಾಜಾಜಿನಗರ, ಕುಂಬಳಗೋಡು ಪ್ರದೇಶಗಳ ಕಾರ್ಖಾನೆಗಳು ವೃಷಭಾವತಿ ನದಿಗೆ ವಿಷಕಾರಿ ಅಂಶಗಳನ್ನು ಬಿಡುತ್ತಲೇ ಬರುತ್ತಿವೆ. ಇದರಿಂದ ಪರಿಸರ ಹಾನಿ ಸಂಭವಿಸುತ್ತಿದ್ದು, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಟ್ಟ ವಾಸನೆ ಜೊತೆಗೆ ಆರೋಗ್ಯ ಸಮಸ್ಯೆ ಉಂಟಾಗುವ ಸಾಧ್ಯತೆ ಹೆಚ್ಚಾಗಿದೆ ಎಂದು ತಿಳಿಸಿದೆ.

ಸಾಮಾನ್ಯವಾಗಿ ಲೋಹದ ಕೈಗಾರಿಕೆಗಳು, ಜವಳಿ, ಬಣ್ಣದ ಕಾರ್ಖಾನೆ, ಅಕ್ಕಿ ಮಿಲ್, ಮೀನು ಕಾರ್ಖಾನೆ ಸೇರಿದಂತೆ ಹಲವು ಕಾರ್ಖಾನೆಗಳು ವಿಷಕಾರಿ ನೀರನ್ನು ನದಿಗೆ ಬಿಡುತ್ತಿವೆ. ಆದರೆ, ತಡರಾತ್ರಿ ಅಥವಾ ಬೆಳಗಿನ ಜಾವ ವಿಷಕಾರಿ ನೀರು ನದಿಗೆ ಬಿಡುವ ಕೈಗಾರಿಕೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿಲ್ಲ.

ಬೆಂಗಳೂರು ನಗರದಲ್ಲಿರುವ ಬಟ್ಟೆಗೆ ಬಣ್ಣ ಹಾಕುವ ಘಟಕಗಳು, ಲೋಹದ ಕೈಗಾರಿಕೆಗಳು, ಬಣ್ಣ ತಯಾರಿಸುವ ಕಾರ್ಖಾನೆಗಳು ತ್ಯಾಜ್ಯವನ್ನು ನೇರವಾಗಿ ಚರಂಡಿ ಇಲ್ಲವೇ ಒಳಚರಂಡಿಗೆ ಬಿಡುತ್ತಿವೆ. ಇಂತಹ ನೀರು ಕೆರೆಗಳಿಗೆ ಸೇರಿ ಕೆರೆಯ ನೀರು ಕಲುಷಿತವಾಗಿ ಕೃಷಿಗೂ ಬಳಕೆಯಾಗದಷ್ಟು ಕಲುಷಿತವಾಗಿದೆ. ಇಷ್ಟೆಲ್ಲ ಇದ್ದರೂ ಮಾಲಿನ್ಯ ನಿಯಂತ್ರಣ ಮಂಡಳಿ ಕಣ್ಣುಮುಚ್ಚಿ ಕುಳಿತಿದೆಯೇ ಎಂಬ ಪ್ರಶ್ನೆ ಪರಿಸರವಾದಿಗಳಿಂದ ಕೇಳಿಬರುತ್ತಿದೆ.

> “ಮಾಲಿನ್ಯ ನಿಯಂತ್ರಣ ಮಂಡಳಿ ತ್ಯಾಜ್ಯವನ್ನು ಕೆರೆಗಳಿಗೆ ಹರಿಸುತ್ತಿರುವ ಕಾರ್ಖಾನೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಇಲ್ಲವಾದಲ್ಲಿ ಬೆಂಗಳೂರಿಗೆ ಕುಡಿವ ನೀರನ್ನು ಒದಗಿಸುತ್ತಿದ್ದ ಹೆಸರಘಟ್ಟ ಹಾಗೂ ತಿಪ್ಪಗೊಂಡನಹಳ್ಳಿ ಜಲಾಶಯಗಳು ಕಲುಷಿತ ನೀರಿನಿಂದ ತುಂಬಿರುವಂತೆ ಮುಂದೆ ಇನ್ನಿತರ ಕೆರೆಗಳು ಕೂಡಾ ಕಲುಷಿತವಾಗಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಪರದಾಡಬೇಕಾದ ಸ್ಥಿತಿ ಉದ್ಭವವಾಗಬಹುದು.
>
> ■ ಪರಿಸರವಾದಿಗಳು

**COURT NOTICE**

Before Honorable Arbitration Tribunal, Thrissur Sri. K.V. MOHAMED GAFOOR, Advocate, Room III, Behind Nirmithi Kendra (Cost Ford), Ayyanthole South Thrissur- 680003.

**ARC 58/20**

Manappuram Asset Finance Ltd No: 111/105, Opp. Nattika Firka Co operative Rural Bank, Valapad P.O Thrissur 680567 - Petitioner

Respondents:-

Mr. Eshwarappa, Aged 44, S/o. Siddappa, 1st Cross, Gangamma Gudi, M V Extn, Hosakote, Banglore Rural, Karnataka – 562114. -R1

Mrs. Suvarna, Aged 41, W/o. Nanjachari, # 37, Chokkondahalli, Kolar, Madivala, Karnataka , 563130. -R2

Mr. Shivakumar A C, Aged 57, S/o. A S Channabasappa,

ಸಂಯುಕ್ತ ಕರ್ನಾಟಕ

| Date | 24-11-2020 |
|---|---|
| Page No | 3 |

# ಗುತ್ತಿಗೆದಾರರ ಪ್ರತಿಭಟನೆ

**ಸಂ.ಕ. ಸಮಾಚಾರ ಬೆಂಗಳೂರು**

ಕಳೆದ 25 ತಿಂಗಳಿನಿಂದ ಬಾಕಿ ಉಳಿಸಿಕೊಂಡಿರುವ ಬಿಲ್ ಪಾವತಿಸುವಂತೆ ಆಗ್ರಹಿಸಿ ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ನೇತೃತ್ವದಲ್ಲಿ ಗುತ್ತಿಗೆ ಕಾರ್ಮಿಕರು ಬಾಕಿ ಪಾವತಿ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಈ ವೇಳೆ ಬಿಬಿಎಂಪಿ ಅಧಿಕಾರಿಗಳು, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ಅಧ್ಯಕ್ಷ ಕೆ.ಟಿ.ಮಂಜುನಾಥ್ ಮಾತನಾಡಿ, ಬಿಬಿಎಂಪಿ ಕಾಮಗಾರಿ ಪೂರ್ಣಗೊಂಡು 25 ತಿಂಗಳಾದರೂ ಪಾಲಿಕೆ ವತಿಯಿಂದ ಗುತ್ತಿಗೆ ಕಾರ್ಮಿಕರಿಗೆ ಇನ್ನೂ ಬಿಲ್ ಪಾವತಿಯಾಗಿಲ್ಲ.

ಬ್ಯಾಂಕ್ ಮತ್ತು ಖಾಸಗಿ ಲೇವಾದಾರರಿಂದ ಬಡ್ಡಿಗೆ ಹಣ ತಂದು ಬಹುತೇಕ ಗುತ್ತಿಗೆದಾರರು ಕಾಮಗಾರಿ ಮಾಡಿದ್ದಾರೆ. ಬಿಬಿಎಂಪಿಯ ನಿಧಾನಗತಿಯ ಬಿಲ್ ಪಾವತಿಸುತ್ತಿರುವುದರಿಂದ ಅಸಲು, ಬಡ್ಡಿಗೆ ಸಮವಾಗುತ್ತದೆ. ಇದರಿಂದ ಗುತ್ತಿಗೆದಾರರನ್ನು ನಂಬಿಕೊಂಡಿರುವ ಕುಟುಂಬವರ್ಗ, ಸಾವಿರಾರು ಕೂಲಿ ಕಾರ್ಮಿಕರು ಸಂಕಷ್ಟ ಎದುರಿಸುತ್ತಿದ್ದಾರೆ.

ಲಂಚ ನೀಡಿದವರಿಗೆ ಮಾತ್ರ ಹಣ ಬಿಡುಗಡೆ ಮಾಡಲಾಗುತ್ತಿದೆ. ಆದ್ದರಿಂದ ಇನ್ನು ಮೇಲೆ ಕಾಮಗಾರಿ ಪೂರ್ಣಗೊಂಡ 6 ತಿಂಗಳ ಅವಧಿಯಲ್ಲಿ ಬಿಲ್ಲು ಪಾವತಿಯಾಗಬೇಕೆಂದು ಆಯುಕ್ತರಿಗೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಹೊಸ ದಿಗಂತ

| Date | 24-11-2020 |
| --- | --- |
| Page No | 14 |

# ಕಚೇರಿ ಮುಂದೆ ಕಾರ್ಯಕರ್ತರ ಪ್ರತಿಭಟನೆ



**ಬೆಂಗಳೂರು:** ಕಳೆದ 25 ತಿಂಗಳಿಂದ ಗುತ್ತಿಗೆದಾರರಿಗೆ 2,800 ಕೋಟಿ ರೂಪಾಯಿಗಿಂತ ಅಧಿಕ ಮೊತ್ತದ ಬಿಲ್ ಬಾಕಿ ಉಳಿಸಿಕೊಂಡ ಪಾಲಿಕೆಯ ವಿರುದ್ಧ ಕಾರ್ಯನಿರತ ಗುತ್ತಿಗೆದಾರ ಸಂಘದ ಕಾರ್ಯಕರ್ತರು ಬಿಬಿಎಂಪಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

**ಗುತ್ತಿಗೆದಾರರ ಬಿಲ್ ಬಾಕಿ ಉಳಿಸಿಕೊಂಡ ಪಾಲಿಕೆ**

ಈ ವೇಳೆ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ಮಾತನಾಡಿ, ಸರ್ಕಾರದ ಯಾವುದೇ ಇಲಾಖೆಗಳ ಗುತ್ತಿಗೆ ಕಾರ್ಯಕ್ಕೆ ಗರಿಷ್ಠ 1 ವರ್ಷದೊಳಗೆ ಬಿಲ್ ಪಾವತಿ ಮಾಡಲಾಗುತ್ತಿದೆ. ಆದರೆ, ಬಿಬಿಎಂಪಿ ನೀಡಿದ್ದ ಗುತ್ತಿಗೆ ಕಾಮಗಾರಿಗಳನ್ನು ಸಾಲ-ಸೋಲ ಮಾಡಿ ನಿಗದಿತ ಅವಧಿಗೆ ಪೂರ್ಣಗೊಳಿಸಿದ್ದರೂ, 2 ವರ್ಷವಾದರೂ ಬಿಲ್ ನೀಡುತ್ತಿಲ್ಲ. ಇದರ ಜೊತೆಗೆ ಅಧಿಕಾರಿಗಳು ಬಿಲ್ ಪಾವತಿಗೆ ಕಮಿಷನ್ ಕೇಳುತ್ತಿದ್ದು, ಹಣ ನೀಡಿದವರಿಗೆ ಮಾತ್ರ ಬಿಲ್ ಪಾವತಿಸುತ್ತಿದ್ದಾರೆ. ಇದರಿಂದಾಗಿ ಬಿಲ್ ಪಾವತಿಗೆ ಅರ್ಹತೆಯಿದ್ದರೂ ಭ್ರಷ್ಟಾಚಾರ ಎಸಗುತ್ತಿರುವ ಪಾಲಿಕೆ ಅಧಿಕಾರಿಗಳು ಕಮಿಷನ್ ಆಡಳಿತ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸುಮಾರು 2 ಸಾವಿರ ಗುತ್ತಿಗೆದಾರರಿಗೆ 2,800ಕೋಟಿ ರೂ.ಗಿಂತ ಅಧಿಕ ಹಣ ಬಾಕಿಯಿದೆ. ಕರೊನಾ ಸಂದರ್ಭ ಸೇರಿ ಸುಮಾರು ಶೇ.50 ಗುತ್ತಿಗೆದಾರರು ಸಾಲ ಮಾಡಿಕೊಂಡು ಅದನ್ನು ಮರುಪಾವತಿಸಲಾಗದೆ ಮನೆ ಮತ್ತು ಇತರೆ ಆಸ್ತಿಗಳನ್ನು ಸಾಲಕ್ಕಾಗಿ ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಮಾರ್ಚ್ ತಿಂಗಳವರೆಗಿನ ಎಲ್ಲ ಬಿಲ್ ಪಾವತಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ನಗರದ 500ಕ್ಕೂ ಹೆಚ್ಚು ಪ್ರಗತಿಯಲ್ಲಿದ್ದ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ. ಈಗ ಪ್ರತಿಭಟನೆ ಮಾಡುತ್ತಿದ್ದು, ಮುಂದೆಯೂ ವಿಳಂಬ ಮಾಡಿದಲ್ಲಿ ಎಲ್ಲ ಕಾಮಗಾರಿ ಸ್ಥಗಿತಗೊಳಿಸಿ ನಗರದ ಮುಖ್ಯ ರಸ್ತೆಗಳಲ್ಲಿ ವಾಹನಗಳನ್ನು ತಡೆದು ರಸ್ತೆ ಬಂದ್ ಮಾಡಿ ಪ್ರತಿಭಟನೆ ಮಾಡಲಾಗುವುದು ಎಂದು ಗುತ್ತಿಗೆದಾರರು ಎಚ್ಚರಿಕೆ ನೀಡಿದರು.

ಹೊಸ ದಿಗಂತ

| Date | 24-11-2020 |
| --- | --- |
| Page No | 14 |

ಹೊಸ ದಿಗಂತ

14

24 Nov 2020

# 478 ಸೋಂಕಿತರು ಆಸ್ಪತ್ರೆಯಿಂದ ಮನೆಗೆ

**ಬೆಂಗಳೂರು:** ನಗರದಲ್ಲಿ ಸೋಮವಾರ 725 ಜನರಿಗೆ ಕೊರೋನಾ ಸೋಂಕು ದೃಢಪಟ್ಟಿದೆ. 478 ಸೋಂಕಿತರು ಆಸ್ಪತ್ರೆಯಿಂದ ಮನೆಗೆ ತೆರಳಿದ್ದು, 10 ಜನರು ಮೃತರಾಗಿದ್ದಾರೆ.



ನಗರದಲ್ಲಿ ಒಟ್ಟು 3,64,390 ಸೋಂಕಿತರು ದೃಢಪಟ್ಟಿದ್ದು, ಇಲ್ಲಿಯವರೆಗೆ 4078 ಜನರು ಸೋಂಕಿಗೆ ಬಲಿಯಾಗಿದ್ದಾರೆ. ಇಲ್ಲಿಯವರೆಗೆ 3,41,902 ಜನರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಕೋವಿಡ್ ನಿಗದಿತ ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳು ಹಾಗೂ ಆರೈಕೆ ಕೇಂದ್ರಗಳು ಒಳಗೊಂಡಂತೆ 18,409 ಜನ ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. ಭಾನುವಾರದ ಬಿಬಿಎಂಪಿ ಕೋವಿಡ್ ವರದಿ ಪ್ರಕಾರ ಸಿಟಿಯಲ್ಲಿ ಒಟ್ಟು ಸಕ್ರಿಯ 2 ಕಂಟೈನ್ಮೆಂಟ್ ಜೋನ್‌ಗಳಿವೆ. ನಗರದ 11,31,120 ಜನರನ್ನು ಪ್ರಾಥಮಿಕ ಸಂಪರ್ಕಿತರನ್ನು ಗುರುತಿಸಲಾಗಿದ್ದು, ದ್ವಿತೀಯ ಸಂಪರ್ಕಿತರನ್ನು 13,16,273 ಜನರನ್ನು ಗುರುತಿಸಲಾಗಿದೆ. ಇದರಲ್ಲಿ ಪಾಸಿಟಿವ್ ಪ್ರಮಾಣ ಶೇ.8.86 ರಷ್ಟಿದೆ. ಕೊರೋನಾಕ್ಕೆ ಮೃತರಾಗುತ್ತಿರುವ ಪ್ರಮಾಣ ಶೇ.1.12 ರಷ್ಟಿದ್ದು, ಗುಣಮುಖರಾಗುತ್ತಿರುವ ಪ್ರಮಾಣ ಶೇ.93.87 ರಷ್ಟಿದೆ.

ಜನದನಿಯ ಸಾರಥಿ
ವಾರ್ತಾ ಭಾರತಿ

| Date | 24-11-2020 |
| --- | --- |
| Page No | 2 |


# ನಾಳೆ ಮಾಂಸ ಮಾರಾಟ ನಿಷೇಧ

ಬೆಂಗಳೂರು, ನ.23: ಸಾಧು ವಾಸವಾನಿ ಜಯಂತಿ ಪ್ರಯುಕ್ತ ನಗರದಲ್ಲಿ ನ.25ರಂದು ಪ್ರಾಣಿವಧೆ ಹಾಗೂ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ.

ನ.25ರ ಬುಧವಾರ ಸಾಧು ವಾಸವಾನಿ ಜಯಂತಿ ಹಿನ್ನೆಲೆ ಬಿಬಿಎಂಪಿಯ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಬಿಬಿಎಂಪಿ ಜಂಟಿ ನಿರ್ದೇಶಕರು(ಪಶುಪಾಲನೆ) ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಜನದನಿಯ ಸಾರಥಿ
ವಾರ್ತಾ ಭಾರತಿ

| Date | 24-11-2020 |
|---|---|
| Page No | 2 |

# ಬಾಕಿ ಬಿಲ್ ಪಾವತಿಗೆ ಒತ್ತಾಯಿಸಿ ಬಿಬಿಎಂಪಿ ಗುತ್ತಿಗೆದಾರರ ಧರಣಿ

ಬೆಂಗಳೂರು, ನ.23: ಬಿಬಿಎಂಪಿ ಕಳೆದ 25 ತಿಂಗಳಿನಿಂದ ಗುತ್ತಿಗೆದಾರರಿಗೆ ಉಳಿಸಿಕೊಂಡಿರುವ ಬಾಕಿ ಬಿಲ್ ಅನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಕಾರ್ಯನಿರತ ಗುತ್ತಿಗೆದಾರ ಸಂಘದ ಸದಸ್ಯರು ಬಿಬಿಎಂಪಿ ಕೇಂದ್ರ ಕಚೇರಿ ಅವರಣದಲ್ಲಿ ಸೋಮವಾರ ಧರಣಿ ನಡೆಸಿದರು.

ಈ ವೇಳೆ ಗುತ್ತಿಗೆದಾರ ಸಂಘದ ಅಧ್ಯಕ್ಷ ಕೆ.ಟಿ.ಮಂಜುನಾಥ್ ಮಾತನಾಡಿ, ಕಾಮಗಾರಿ ಪೂರ್ಣಗೊಂಡು 25 ತಿಂಗಳಾದರೂ ಬಿಬಿಎಂಪಿ ವತಿಯಿಂದ ಸಕಾಲಕ್ಕೆ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡುತ್ತಿಲ್ಲ.

ಬ್ಯಾಂಕ್ ಮತ್ತು ಖಾಸಗಿ ಲೇವಾದೇವಿದಾರರಿಂದ ಬಡ್ಡಿಗೆ ಹಣ ತಂದು, ಬಹುತೇಕ ಗುತ್ತಿಗೆದಾರರು ಕಾಮಗಾರಿಗಳನ್ನು ಮಾಡಿರುತ್ತಾರೆ. ಆದ್ದರಿಂದ ಕೂಡಲೇ ಬಾಕಿ ಹಣ ಪಾವತಿಸುವಂತೆ ಅವರು ಒತ್ತಾಯಿಸಿದರು.

ಧರಣಿಯಲ್ಲಿ ಗುತ್ತಿಗೆದಾರ ಸಂಘದ ಸದಸ್ಯರಾದ ಎಂ.ದೇವರಾಜ್, ವೆಂಕಟೇಶ್, ರವಿಕುಮಾರ್, ಶಿವಣ್ಣ, ಟಿ.ವೆಂಕಟೇಶ್, ಮಂಜುನಾಥ್ ಉಪಸ್ಥಿತರಿದ್ದರು.

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 24-11-2020 |
| --- | --- |
| Page No | 1 |

## ದೆಹಲಿ-ಮ.ಪ್ರದೇಶ ಮಾದರಿಯಲ್ಲೇ ಬೆಂಗಳೂರಲ್ಲೂ ಮಾಸ್ಕ್ ಧರಿಸದವರಿಗೆ ಕಾದಿದ್ಯಾ ಶಿಕ್ಷೆ..!

# 'ದಂಡಾಸ್ತ್ರ' ವರ್ಕೌಟ್ ಆಗಿದಿದ್ರೆ 'ಜೈಲ್ ಶಿಕ್ಷೆನಾ..?'

ಬೆಂಗಳೂರು: ಮಹಾಮಾರಿ ಕೊರೊನಾ ತನ್ನ ವಿಧ್ವಂಸಕತೆಯನ್ನು ಮೆರೆಯುತ್ತಿರುವ ಪರಿಯನ್ನು ಗಮನಿಸಿದರೆ ಸದ್ಯಕ್ಕಂತೂ ನಿಗ್ರಹವಾಗಲೀ ಉತ್ಪಾಟನೆಯಾಗಲೀ ಸಾಧ್ಯವಿಲ್ಲ ಎನಿಸುತ್ತಿದೆ. ದೆಹಲಿ, ಮಧ್ಯಪ್ರದೇಶ, ಪಂಜಾಬ್, ಹರಿಯಾಣ ಸೇರಿದಂತೆ ದೇಶದ ಕೆಲ ಭಾಗಗಳಲ್ಲಿ ಕೊರೊನಾದ ಮತ್ತೊಂದು ಅಲೆ ಅಪ್ಪಳಿಸುವ ಆತಂಕದ ವರ್ತಮಾನ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಮಾಸ್ಕ್ ಧಾರಣೆಯನ್ನು ಮತ್ತಷ್ಟು ಕಠಿಣಗೊಳಿಸಲಾಗುತ್ತಿದೆ. ಇಷ್ಟು ದಿನ ಕೇವಲ ದಂಡಕ್ಕೆ



ಸಾಂದರ್ಭಿಕ ಚಿತ್ರ

ಸೀಮಿತವಾಗಿದ್ದ ಶಿಕ್ಷೆಯನ್ನು ಈ ರಾಜ್ಯಗಳಲ್ಲಿ ಜೈಲುವಾಸದವರೆಗೂ ವಿಸ್ತರಿಸಲಾಗಿದೆ. ಬೆಂಗಳೂರಿನಲ್ಲಿ ಈ ಒಂದು ನಿಯಮ ಜಾರಿಗೆ ಬರಲಿದೆಯಾ ಎನ್ನುವ ಪ್ರಶ್ನೆ ಕೂಡಾ ಸೃಷ್ಟಿಯಾಗಿದೆ.

ರಾಜಧಾನಿ ಕೊನೆಯ ಪುಟಕ್ಕೆ

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 24-11-2020 |
|---|---|
| Page No | 6 |

# 'ಜೈಲ್ ಶಿಕ್ಷೆನಾ..?'

ಬೆಂಗಳೂರಿನಲ್ಲಿನ ಸದ್ಯದ ಪರಿಸ್ಥಿತಿ ಗಮನಿಸಿದರೆ ಜನ ಕೊರೊನಾ ಸಂಪೂರ್ಣ ನಿವಾರಣೆಯಾಗಿದೆ ಎನ್ನುವ ರೇಂಜಿನಲ್ಲಿ ಅಡ್ಡಾಡುತ್ತಿದ್ದಾರೆ. ಅವರಿಗೆ ಮಾಸ್ಕ್ ಧಾರಣೆಯಾಗಲೀ, ಸಾಮಾಜಿಕ ಅಂತರವಾಗಲೀ ಯಾವುದೂ ಗಂಭೀರ ಎನಿಸುತ್ತಲೇ ಇಲ್ಲ. ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆ ತನ್ನದೇ ಆದ ರೀತಿಯಲ್ಲಿ ಕಾರ್ಯಪ್ರವೃತ್ತವಾಗಿದ್ದರೂ ಜನ ಮಾತ್ರ ಇದ್ಯಾವುದಕ್ಕೋ ಡೋಂಟ್ ಕೇರ್ ಎನ್ನುವಂತಿದ್ದಾರೆ.

ವಿದೇಶಗಳಲ್ಲಿ ಕೊರೊನಾ ಮತ್ತೆ ತನ್ನ ಮಾರಕತೆಯನ್ನು ಪ್ರದರ್ಶಿಸುತ್ತಿರುವ ಆತಂಕಕಾರಿ ಸಂಗತಿ ಇಡೀ ವಿಶ್ವವನ್ನು ಚಿಂತೆಗೀಡು ಮಾಡಿದೆ. ನಮ್ಮ ದೇಶದ ಸಾಕಷ್ಟು ರಾಜ್ಯಗಳಲ್ಲೂ ಇಂತಹುದ್ದೇ ಬೆಳವಣಿಗೆಗಳು ಕಂಡು ಬಂದಿರುವ ಹಿನ್ನೆಲೆಯಲ್ಲಿ ಲಾಕ್ಡೌನ್ ಜಾರಿಗೊಳಿಸುವ ಚಿಂತನೆಗೆ ಅಲ್ಲಿನ ಸರ್ಕಾರಗಳು ಬಂದಿವೆಯೆನ್ನಲಾಗುತ್ತಿದೆ.

ದೆಹಲಿ, ಹರಿಯಾಣ, ಪಂಜಾಬ್ನಂತಹ ರಾಜ್ಯಗಳಲ್ಲಿ ಈಗಾಗಲೇ ಸೀಮಿತ ಲಾಕ್ಡೌನ್ ಜಾರಿಯ ನಿರ್ಧಾರ ನಿರ್ಣಾಯಕ ಹಂತದಲ್ಲಿದೆ. ಜನರು ಸ್ವಯಂಪ್ರೇರಿತರಾಗಿ ಸುರಕ್ಷತೆ ಪಡೆಯುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಸೋಂಕು ಹರಡದಂತೆ ಮುನ್ನೆಚ್ಚರಿಕೆ ವಹಿಸಲು ಸೂಚನೆ ನೀಡಲಾಗಿದ್ದು, ಮಾಸ್ಕ್ ಧಾರಣೆ ಹಾಗೂ ಸಾಮಾಜಿಕ ಅಂತರವನ್ನು ಕಟ್ಟುನಿಟ್ಟುಗೊಳಿಸಲಾಗಿದೆ.

ಅದರಲ್ಲೂ ಪ್ರಮುಖವಾಗಿ ಮಾಸ್ಕ್ ಧಾರಣೆಯನ್ನು ತೀವ್ರ ಗಂಭೀರವಾಗಿ ಪರಿಗಣಿಸಲಾಗಿದೆ. ಕೇವಲ ದಂಡ ಪ್ರಯೋಗಕ್ಕೆ ಸೀಮಿತವಾಗಿದ್ದ ಶಿಕ್ಷೆಯನ್ನು ಜೈಲು ವಾಸಕ್ಕೂ ಈಗಾಗಲೇ ವಿಸ್ತರಿಸಲಾಗಿದ್ದು, ಪೊಲೀಸರಿಗೆ ಹೆಚ್ಚಿನ ಪವರ್ ಕೂಡ ನೀಡಲಾಗಿದೆ.

ದೆಹಲಿ ಹಾಗೂ ಮಧ್ಯಪ್ರದೇಶಗಳಂತಹ ರಾಜ್ಯಗಳಲ್ಲಿ ಮಾಸ್ಕ್ ಧರಿಸದೆ ರಸ್ತೆಗಿಳಿದರೆ ನೇರವಾಗಿ ಜೈಲು ಶಿಕ್ಷೆ ವಿಧಿಸುವಂತಹ ಅಧಿಕಾರವನ್ನು ಸ್ಥಳೀಯ ಪೊಲೀಸರಿಗೆ ನೀಡಲಾಗಿದೆ. ದಂಡದಿಂದ ಯಾವುದೇ ಪ್ರಯೋಜನವಾಗದ್ದನ್ನು ಮನಗಂಡು ಮಾಸ್ಕ್ ಧಾರಣೆಯ ಬಗ್ಗೆ ಜಾಗೃತಿಗಿಂತ ಭಯ ಹುಟ್ಟಿಸುವ ಅನಿವಾರ್ಯ ಪರಿಸ್ಥಿತಿಗೆ ಪೊಲೀಸರು ಬಂದಿದ್ದಾರೆ. ಈಗಾಗಲೇ ಮಾಸ್ಕ್ ಧರಿಸದೆ ರಸ್ತೆಗೆ ಬಂದ ಅದೆಷ್ಟೋ ನಾಗರೀಕರು ಹಾಗೂ ವಾಹನ ಸವಾರರಿಗೆ ಸೀಮಿತ ಅವಧಿಯ ಜೈಲು ಶಿಕ್ಷೆಯ ಅನುಭವವೂ ಕೂಡ ಆಗಿದೆ.

ಇದೇ ಪರಿಸ್ಥಿತಿ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಜಾರಿಯಾಗುತ್ತಾ? ಎನ್ನುವ ಪ್ರಶ್ನೆ ಸಾರ್ವಜನಿಕರಲ್ಲಿ ಮೂಡಿದೆ. ಏಕೆಂದರೆ ಸದ್ಯದ ಪರಿಸ್ಥಿತಿ ಆ ರಾಜ್ಯಗಳ ಪರಿಸ್ಥಿತಿಗಿಂತ ಭಿನ್ನವಾಗಿಲ್ಲ. ಮಾಸ್ಕ್ ಧಾರಣೆಯ ಬಗ್ಗೆ ಜಾಗೃತಿ ಇಲ್ಲದಂತೆ ವರ್ತಿಸುವವರ ಸಂಖ್ಯೆ ಕಡಿಮೆಯಾಗಿಲ್ಲ. ಇಲ್ಲಿಯೂ ದೆಹಲಿ ಹಾಗೂ ಮಧ್ಯಪ್ರದೇಶ ಮಾದರಿಯ ಜೈಲು ಶಿಕ್ಷೆ ವಿಧಿಸುವ ಆಲೋಚನೆ ಏನಾದರೂ ಇದ್ದಿರಬಹುದಾ? ಎನ್ನುವ ಪ್ರಶ್ನೆಗೆ ಬಿಬಿಎಂಪಿ ಕಮೀಷನರ್ ಮಂಜುನಾಥ್ ಪ್ರಸಾದ್ ಜಾಣ ಉತ್ತರ ನೀಡಿದ್ದಾರೆ.

ದೆಹಲಿ ಹಾಗೂ ಮಧ್ಯಪ್ರದೇಶದಷ್ಟು ಬೆಂಗಳೂರಿನ ಪರಿಸ್ಥಿತಿ ಹಾಳಾಗಿಲ್ಲ. ಇಲ್ಲಿ ಎಲ್ಲವೂ ಕಂಟ್ರೋಲ್‌ನಲ್ಲಿದೆ. ಹಾಗಾಗಿ ಜೈಲು ಶಿಕ್ಷೆ ಜಾರಿಗೊಳಿಸುವಂತಹ ಚಿಂತನೆಯೂ ಇಲ್ಲ, ಪ್ರಸ್ತಾವನೆಯೂ ಸದ್ಯಕ್ಕಿಲ್ಲ. ಅದಲ್ಲದೆ ಅಂತಹ ನಿರ್ಧಾರವನ್ನು ತೆಗೆದುಕೊಳ್ಳುವ ಅಧಿಕಾರ ಬಿಬಿಎಂಪಿಗೆ ಇಲ್ಲವೇ ಇಲ್ಲ. ಪರಿಸ್ಥಿತಿ ನಿಯಂತ್ರಣ ಮೀರಿದರೆ ಅಂತಹದ್ದೊಂದು ಗಂಭೀರವಾದ ನಿರ್ಧಾರವನ್ನು ತೆಗೆದುಕೊಳ್ಳುವ ಪವರ್ ಸರ್ಕಾರಕ್ಕಿದೆಯೇ ಹೊರತು ಬಿಬಿಎಂಪಿಗೆ ಇಲ್ಲ. ನಮ್ಮದೇನಿದ್ದರೂ ಸರ್ಕಾರ ನೀಡಿದ ಆದೇಶವನ್ನು ಅನುಷ್ಠಾನಗೊಳಿಸುವುದಷ್ಟೇ ಎಂದು 'ಜಯಕಿರಣ'ಕ್ಕೆ ತಿಳಿಸಿದ್ದಾರೆ.

ಲಾಕ್ಡೌನ್ ಸಂದರ್ಭದಲ್ಲೂ ಹಿಂದಿನ ಕಮೀಷನರ್ ಯಾವುದೇ ಕಾರಣಕ್ಕೂ ಲಾಕ್ಡೌನ್ ಜಾರಿ ಮಾಡುವುದಿಲ್ಲ ಎಂದು ಹೇಳಿ ನಂತರ ಅದನ್ನು ಅನುಷ್ಠಾನಕ್ಕೆ ತಂದಿದ್ದನ್ನು ನೋಡಿದ್ದೇವೆ. ಜೈಲು ಶಿಕ್ಷೆ ವಿಷಯದಲ್ಲೂ ಅದೇ ಪರಿಸ್ಥಿತಿ ಮರುಕಳಿಸಿದರೆ ಆಶ್ಚರ್ಯವಿಲ್ಲ.

ಸಂಜೆವಾಣಿ
1982

| Date | 23-11-2020 |
| --- | --- |
| Page No | 2 |


# ಅಧಿಕಾರಿಗಳು ನಾಪತ್ತೆ ಕಸ ಸಮಸ್ಯೆ ಉಲ್ಬಣ



ಶಾಖಾಂಬರಿ ನಗರದ ಇಂದಿರಾ ವೃತ್ತದಲ್ಲಿ ವಿಲೇವಾರಿಯಾಗದೆ ಕಸದ ರಾಶಿ ಬಿದ್ದಿರುವುದು.

ಬೆಂಗಳೂರು,ನ.23–ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ನಿರ್ವಹಣೆ ಮಾಡಬೇಕಾಗಿರುವ ಸ್ಥಳೀಯ ಅಧಿಕಾರಿಗಳೇ ನಾಪತ್ತೆಯಾಗಿದ್ದು, ಇದರಿಂದಲೇ ಹಲವು ಸಮಸ್ಯೆಗಳು ಹುಟ್ಟುಕೊಂಡಿವೆ ಎಂದು ಕಾಂಗ್ರೆಸ್ ಶಾಸಕಿ ಸೌಮ್ಯಾರೆಡ್ಡಿ ಆರೋಪಿಸಿದರು.

ತಡರಾತ್ರಿ ಕ್ಷೇತ್ರ ವ್ಯಾಪ್ತಿಯ ಪ್ರದೇಶಗಳಲ್ಲಿ ಕಸ ನಿರ್ವಹಣೆ ಕುರಿತು ಪರಿಶೀಲನೆ ನಡೆಸಿದ ಅವರು, ಇಲ್ಲಿನ ಪಾಲಿಕೆ ವ್ಯಾಪ್ತಿಯ ಶಾಕಾಂಬಿನಗರ ವಾರ್ಡ್–179ನಲ್ಲಿ ಕಸ ವಿಲೇವಾರಿ ಜೀವಂತವಾಗಿದ್ದು, ಸಾರ್ವಜನಿಕರಿಗೆ ಮಾತ್ರವಲ್ಲದೆ, ಪ್ರಾಣಿಗಳ ಪ್ರಾಣಕ್ಕೂ ಅಪಾಯ ಉಂಟಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಪ್ರದೇಶದ ಎಇ ಸೇರಿದಂತೆ ಇನ್ನಿತರೆ ಅಧಿಕಾರಿಗಳ ನಿರ್ಲಕ್ಷ್ಯ ಕುರಿತು ಬಿಬಿಎಂಪಿ ಆಯುಕ್ತ ಹಾಗೂ ಸಂಬಂಧಿಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ, ಯಾವುದೇ ಕ್ರಮಕ್ಕೆ ಮುಂದಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇತ್ತೀಚಿಗೆ ವಾರ್ಡ್ ಮಟ್ಟದ ಸಭೆ ನಡೆಸಲಾಗಿದ್ದರೂ, ಸ್ಥಳೀಯ ನೋಡೆಲ್ ಅಧಿಕಾರಿಗಳ ಸಭೆಯಲ್ಲಿ ಭಾಗವಹಿಸಿಲ್ಲ. ಅಲ್ಲದೆ, ಒಣ ಮತ್ತು ಹಸಿ ತ್ಯಾಜ್ಯ ನಿರ್ವಹಣೆ ಕುರಿತು ಬಿಬಿಎಂಪಿ ಹೆಚ್ಚಾಗಿ ಗಮನ ಹರಿಸಬೇಕು ಎಂದು ಸೌಮ್ಯಾರೆಡ್ಡಿ ಒತ್ತಾಯಿಸಿದರು.

ಸಂಜೆವಾಣಿ
1982

| Date | 23-11-2020 |
| --- | --- |
| Page No | 3 |




ಇಂದು ಬೆಳಗ್ಗೆ ಬಿಬಿಎಂಪಿ ಕೇಂದ್ರ ಕಚೇರಿಯ ಆವರಣದಲ್ಲಿ ಬಾಕಿ ಇರುವ ಬಿಲ್‌ಗಳನ್ನು ಪಾವತಿಸುವಂತೆ ಒತ್ತಾಯಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯನಿರತ ಗುತ್ತಿಗೆದಾರರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

# ಬಾಕಿ ಹಣ ಪಾವತಿಗಾಗಿ ಗುತ್ತಿಗೆದಾರರ ಪ್ರತಿಭಟನೆ

ಬೆಂಗಳೂರು.ನ23-ಬಾಕಿ ಇರುವ ಹಣ ಪಾವತಿಸುವಂತೆ ಒತ್ತಾಯಿಸಿ ಗುತ್ತಿಗೆದಾರರು ಇಂದು ಬಿಬಿಎಂಪಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಂಜುನಾಥ್ ಕಳೆದ 25 ತಿಂಗಳಿಂದ ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ.ನಮ್ಮ ಹಣ ಪಾವತಿದೆ ಅನಗತ್ಯ ವಿಳಂಬ ಮಾಡುತ್ತಿದ್ದಾರೆ. ತಿಂಗಳಲ್ಲಿ ನಾಲ್ಕೈದು ಬಾರಿ ಹೋಗಿ ಮನವಿ ಸಲ್ಲಿಸಿದ್ರೂ ಕ್ಯಾರೆ ಎನ್ನುತ್ತಿಲ್ಲ ಕಾಮಗಾರಿಗೆ ಮಾಡಿರೋ ಸಾಲ ತೀರಿಸಲು ಮನೆ ಮಠ ಮಾರಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕೊರೋನಾ ಸಂಧರ್ಭದಲ್ಲೂ ಅಧಿಕಾರಿಗಳು ಭ್ರಷ್ಟಾಚಾರ ಮಾಡುತ್ತಿದ್ದಾರೆ. ಸದ್ಯ ಎಲ್ಲಾ ಕಾಮಗಾರಿ ಸ್ಥಗಿತಗೊಳಿಸಲು ತೀರ್ಮಾನಿಸಲಾಗಿದೆ ಎಂದು ಎಚ್ಚರಿಸಿದರು.

500ರಕ್ಕೂ ಅಧಿಕ ಕಾಮಗಾರಿ ಸ್ಥಗಿತಗೊಳಿಸಿದ್ದೇವೆ.ಕಾಮಗಾರಿ ಬಿಲ್ ಹಣ ನಂಬಿಕೊಂಡು ಎರಡು ಸಾವಿರ ಗುತ್ತಿಗೆದಾರರಿದ್ದೇವೆ.ಆಯುಕ್ತರು ಬಂದು ಕೂಡಲೇ ಬಾಕಿ ಹಣ ಬಿಡುಗಡೆ ಮಾಡಬೇಕು.

ಬೇಡಿಕೆಗೆ ಈಗ ಸ್ಪಂದಿಸದಿದ್ರೆ ಎಲ್ಲಾ ಮುಖ್ಯ ರಸ್ತೆಯಲ್ಲಿ ವಾಹನ ನಿಲ್ಲಿಸಿ ಪ್ರತಿಭಟನೆ ಮಾಡುತ್ತೇವೆ. ಅತೀ ಹೆಚ್ಚು ಬಿಲ್ ಆಗಿರೋ ಕಾಮಗಾರಿಗೆ ಲಂಚ ಪಡೆದು ಹಣ ನೀಡಿದ್ದಾರೆ.ಇದು ಸೀನಿಯಾರಿಟಿ ಬಿಲ್ ವೈಲೇಷನ್ ಮಾಡಲಾಗಿದೆ.

ಬಿಬಿಎಂಪಿ ಇತಿಹಾಸದಲ್ಲಿ ದಸರಾ ಹಬ್ಬಕ್ಕೆ ಬಿಡುಗಾಸನ್ನೂ ನೀಡಿಲ್ಲ. ಕಾಮಗಾರಿಗಳ ಹಣ ಮಂಜೂರು ಮಾಡಿಲ್ಲ ಎಂದು ಪ್ರತಿಭಟನೆ ಕಳೆದ 25 ತಿಂಗಳಿಂದ ಬಿಲ್ ಪಾವತಿ ಮಾಡಿಲ್ಲ ಕೊರೊನಾ ಸಂಕಷ್ಟ ಇರೋದ್ರಿಂದ ಸಾಲ ತೀರಿಸಲು ಆಗುತ್ತಿಲ್ಲ

ಗುತ್ತಿಗೆದಾರರನ್ನು ನಂಬಿಕೊಂಡು ಸಾವಿರಾರು ಕೂಲಿ ಕಾರ್ಮಿಕರು, ಸಾಮಗ್ರಿ ಮಾರಾಟಗಾರರು ಜೀವನ ನಡೆಸುತ್ತಿದ್ದಾರೆ. ಅವರೆಲ್ಲ ಬೀದಿಗೆ ಬಿದ್ದಿದ್ದಾರೆ ಎಷ್ಟೇ ಮನವಿ ಮಾಡಿದರೂ ನಮಗೆ ಹಣ ಬಿಡುಗಡೆ ಮಾಡುತ್ತಿಲ್ಲ ಲಂಚ ನೀಡಿದವರಿಗೆ ಹಣ ಬಿಡುಗಡೆ ಮಾಡುತ್ತಿದ್ದಾರೆ

ಕೂಡಲೇ ಅಧಿಕಾರಿಗಳು ಬಿಲ್ ಪಾವತಿ ಮಾಡಬೇಕು ಎಂದು ಆಗ್ರಹ ಕೂಡಲೇ ಹಣ ಬಿಡುಗಡೆ ಮಾಡದೇ ಇದ್ದಲ್ಲಿ ಕಾಮಗಾರಿ ಸ್ಥಗಿತ ಮಾಡುತ್ತೇವೆಂದು ಎಚ್ಚರಿಕೆ ನೀಡಿದರು.

ಸಂಜೆವಾಣಿ 1982

| Date | 23-11-2020 |
| --- | --- |
| Page No | 8 |

# ತ್ಯಾಜ್ಯ ಸಂಸ್ಕರಣೆ ನಿಗಮ ರಚನೆ ಸರ್ಕಾರ ಚಿಂತನೆ

ಬೆಂಗಳೂರು, ನ.23–ಜಾತಿ ಆಧಾರಿತ ಹೊಸ ನಿಗಮ ಮಂಡಳಿಗಳ ರಚನೆಗೆ ಕೈಹಾಕಿರುವ ರಾಜ್ಯ ಸರ್ಕಾರವೂ, ಇದೀಗ ರಾಜಧಾನಿ ಬೆಂಗಳೂರಿನಲ್ಲಿ ಕಸದ ಸಮಸ್ಯೆಗೆ ಸುದೀರ್ಘ ಪರಿಹಾರ ಒದಗಿಸುವ ನಿಟ್ಟಿನಲ್ಲಿ ನೂತನ ಮಂಡಳಿ ಅಥವಾ ನಿಗಮ ರಚನೆಗೆ ಒಲವು ವ್ಯಕ್ತಪಡಿಸಿದೆ.

ಬೆಂಗಳೂರಿನಲ್ಲಿ ರಾಶಿ ರಾಶಿ ಕಸದ ನಿರ್ವಹಣೆಯೇ ಬಿಬಿಎಂಪಿಗೆ ದೊಡ್ಡ ಸವಾಲಾಗಿದೆ.ಅಷ್ಟೇ ಅಲ್ಲದೆ, ಇದಕ್ಕಾಗಿ ದಂಡ ವಸೂಲಿಗೆ ಮುಂದಾದರೂ, ಸಾರ್ವಜನಿಕರಿಂದ ಸ್ಪಂದನೆ ವ್ಯಕ್ತವಾಗಿಲ್ಲ.

ಇನ್ನು, ಪ್ರತಿ ಮನೆಯಿಂದಲೂ ಶುಲ್ಕ ವಿಧಿಸುವ ಪ್ರಸ್ತಾವನೆ ಇದೆ. ಆದರೆ, ಇದಕ್ಕೆ ರಾಜ್ಯ ಸರ್ಕಾರದ ವಿರುದ್ಧ ಜನಾಕ್ರೋಶ ವ್ಯಕ್ತವಾಗುವ ಅಭಿಪ್ರಾಯ ಹಲವರಲ್ಲಿ ಇದೆ.

ಹಾಗಾಗಿ, ಸದ್ಯಕ್ಕೆ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ವಹಣೆಗೆ ಪ್ರತ್ಯೇಕ ಮಂಡಳಿ ಅಥವಾ ನಿಗಮ ರಚನೆಗೆ ರಾಜ್ಯ ಸರ್ಕಾರ ಮುಂದಾಗಿದೆ ಎಂದು ತಿಳಿದುಬಂದಿದೆ.

ತ್ಯಾಜ್ಯ ಸಂಸ್ಕರಣಾ ಘಟಕದ ಜತೆ ಕಸ ನಿರ್ವಹಣೆಯ ಜವಾಬ್ದಾರಿಯನ್ನು ನಿಗಮ ಅಥವಾ ಮಂಡಳಿ ರಚಿಸಿ ಹೊಣೆ ನೀಡುವ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ.

ಸದ್ಯ ಬಿಬಿಎಂಪಿಯಿಂದ ಕಸ ನಿರ್ವಹಣೆ ನಡೆ–ಯುತ್ತಿದೆ. ಬಿಬಿಎಂಪಿಯಿಂದ ಪ್ರಸ್ತಾವನೆ ಸಲ್ಲಿಸಲು ರಾಜ್ಯ ಸರ್ಕಾರ ಬಿಬಿಎಂಪಿ ಆಯುಕ್ತರಿಗೆ ಸೂಚಿಸಿದೆ ಎಂದು ಮೂಲಗಳು ತಿಳಿಸಿದ್ದು, ಇದಕ್ಕಾಗಿ ಪಾಲಿಕೆ ಅಧಿಕಾರಿಗಳು ತಯಾರಿಗೆ ಮುಂದಾಗಿದ್ದಾರೆ.

ಈ ಸಂಜೆ

| Date | 23-11-2020 |
| --- | --- |
| Page No | 1 |

# ಲಸಿಕೆ ಸಂಗ್ರಹ ಸಿದ್ಧತೆ

# ಬಿಬಿಎಂಪಿಯಿಂದ ಸಿಎಂಗೆ ಮಾಹಿತಿ

ಬೆಂಗಳೂರು, ನ.23- ಕೊರೊನಾ ವ್ಯಾಕ್ಸಿನ್ ಕುರಿತು ನಾಳೆ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಡಿಯೋ ಕಾನ್ಫರೆನ್ಸ್ ಮೂಲಕ ಮಹತ್ವದ ಸಭೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಬಿಬಿಎಂಪಿ ಲಸಿಕೆ ಸಂಗ್ರಹಣೆ, ವಿತರಣೆ ಸಿಬ್ಬಂದಿ ಸೇರಿದಂತೆ ಎಲ್ಲ ಅಂಕಿ ...ಪುಟ 2

## ಸಿಎಂಗೆ ಮಾಹಿತಿ

-ಅಂಶಗಳನ್ನೊಳಗೊಂಡ ಮಾಹಿತಿಗಳನ್ನು ಮುಖ್ಯಮಂತ್ರಿಗೆ ರವಾನಿಸಿದೆ.

ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಅವರು ಬೆಂಗಳೂರು ನಗರದಲ್ಲಿ ಕೊರೊನಾ ಲಸಿಕೆಯನ್ನು ಎಷ್ಟು ಸ್ಟೋರೇಜ್ ಮಾಡಬಹುದು, ಅದಕ್ಕಿರುವ ವ್ಯವಸ್ಥೆಗಳೆಷ್ಟು, ಎಲ್ಲೆಲ್ಲಿ ಸಂಗ್ರಹಿಸಬಹುದು, ಆರೋಗ್ಯ ಸಿಬ್ಬಂದಿಗಳ ವಿವರ, ಪೂರ್ವ ಸಿದ್ಧತೆ ಹಂತದ ಎಲ್ಲ ಮಾಹಿತಿಗಳ ಪ್ರಸ್ತಾವವನ್ನು ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ರವಾನಿಸಲಾಗಿದೆ.

ಸದ್ಯ ಬಿಬಿಎಂಪಿ ಬಳಿ ಒಂದು ಲಕ್ಷದಷ್ಟು ಲಸಿಕೆ ಸಂಗ್ರಹಿಸಲು ವ್ಯವಸ್ಥೆ ಇದೆ. ಇನ್ನುಳಿದಂತೆ ಖಾಸಗಿ ಆಸ್ಪತ್ರೆ, ಪಶು ಸಂಗೋಪನಾ ಇಲಾಖೆ ಬಳಿ ಸ್ಟೋರೇಜ್ ಮಾಡಲು ಚಿಂತನೆ ನಡೆಸಲಾಯಿತು. ಶೀತಲ ಸಂಗ್ರಹ ಸರಪಳಿ ಬಗ್ಗೆಯೂ ಮಾಹಿತಿ ರವಾನಿಸಲಾಗಿದೆ. ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಕೋಲ್ಡ್ ಸ್ಟೋರೇಜ್ ಬಗ್ಗೆಯೂ ಕೂಡ ಮಾಹಿತಿ ಕಲೆ ಹಾಕಲಾಗಿದೆ.

94 ಸಾವಿರ ಆರೋಗ್ಯ ಸಿಬ್ಬಂದಿಗಳ ಪಟ್ಟಿ ಸಿದ್ಧತೆ ಪ್ರಸ್ತಾಪ ಸಲ್ಲಿಸಲಾಗಿದ್ದು, ಮೊದಲಿಗೆ ಆರೋಗ್ಯ ಸಿಬ್ಬಂದಿಗೆ ನಿಗದಿತ ಸಮಯದೊಳಗೆ ವ್ಯಾಕ್ಸಿನ್ ಕೊಡಬೇಕಾಗಿ ಬಂದರೆ ಆಗ ಹೆಚ್ಚಿನ ಸಿಬ್ಬಂದಿಯ ಅಗತ್ಯತೆ ಬಗ್ಗೆಯೂ ಮಾಹಿತಿಯಲ್ಲಿ ಪ್ರಸ್ತಾಪ ಸಲ್ಲಿಸಲಾಗಿದೆ.

**ನಗರದಲ್ಲಿ 84 ಪ್ರಾಥಮಿಕ ಆರೋಗ್ಯ ಕೇಂದ್ರ**

**175 ರೆಫ್ರಿಜರೇಟರ್**

**150 ಡಿಪ್ ಡೀಪ್ ರೆಫ್ರಿಜರೇಟರ್**

**ಫ್ರೀಜರ್ ಕೋಲ್ಡ್ ಬಾಕ್ಸ್**

**ವ್ಯಾಕ್ಸಿನ್ ಕ್ಯಾರಿಯರ್**

ಸ್ಟೆಬಲೈಜರ್ ಬಗ್ಗೆ ಮಾಹಿತಿ , ಎಲ್ಲ ಅಂಕಿ-ಅಂಶಗಳನ್ನು ಕೇಂದ್ರಕ್ಕೆ ಸಲ್ಲಿಸಿರುವ ಆರೋಗ್ಯ ಇಲಾಖೆ ಕೆಲಸದ ಬಗ್ಗೆಯೂ ಮಾಹಿತಿ ನೀಡಲಾಗಿದೆ. ರಾಜ್ಯದಲ್ಲಿ 10ಬೃಹತ್ ಕೋಲ್ಡ್ ಸ್ಟೋರೇಜ್‌ಗಳು, 2 ಬೃಹತ್ ಫ್ರೀಜರ್‌ಗಳು, 3626 ಕೋಲ್ಡ್ ಬಾಕ್ಸ್‌ಗಳು, 55,347 ವ್ಯಾಕ್ಸಿನ್ ಕ್ಯಾರಿಯರ್ ಬಾಕ್ಸ್‌ಗಳು, ಒಟ್ಟು 6144 ಬಳಕೆಯಲ್ಲಿರುವ ಸ್ಟೆಬಲೈಜರ್‌ಗಳ ಬಗ್ಗೆ ಮಾಹಿತಿ ರವಾನಿಸಲಾಗಿದೆ.

ಈ ಸಂಜೆ

| Date | 23-11-2020 |
| --- | --- |
| Page No | 8 |




25 ತಿಂಗಳಿಂದ ಕಾಮಗಾರಿಗಳ ಹಣ ಮಂಜೂರು ಮಾಡಿಲ್ಲ ಎಂದು ಗುತ್ತಿಗೆದಾರರು ಇಂದು ಬಿಬಿಎಂಪಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.






# ಹಣ ಮಂಜೂರಾತಿಗಾಗಿ ಬಿಬಿಎಂಪಿ ಗುತ್ತಿಗೆದಾರರ ಪ್ರತಿಭಟನೆ

**ಬೆಂಗಳೂರು, ನ.23-** ಕಳೆದ 25 ತಿಂಗಳಿಂದ ಕಾಮಗಾರಿಗಳ ಹಣ ಮಂಜೂರು ಮಾಡಿಲ್ಲ ಎಂದು ಗುತ್ತಿಗೆದಾರರು ಇಂದು ಬಿಬಿಎಂಪಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಕೊರೊನಾ ಸಂಕಷ್ಟ ಇರುವುದರಿಂದ ನಾವು ಮಾಡಿರುವ ಸಾಲ ತೀರಿಸಲು ಸಾಧ್ಯವಾ ಗುತ್ತಿಲ್ಲ. ಎಷ್ಟೇ ಮನವಿ ಮಾಡಿದರೂ ನಮಗೆ ಹಣ ಬಿಡುಗಡೆಯಾಗುತ್ತಿಲ್ಲ, ಲಂಚ ನೀಡಿದವರಿಗೆ ಮಾತ್ರ ಅಧಿಕಾರಿಗಳು ಬಿಲ್ ಪಾವತಿ ಮಾಡುತ್ತಿದ್ದಾರೆ. ಕೂಡಲೇ ಹಣ ಬಿಡುಗಡೆ ಮಾಡದಿದ್ದಲ್ಲಿ ಕಾಮಗಾರಿಗಳನ್ನು ಸ್ಥಗಿತ ಮಾಡುತ್ತೇವೆ ಎಂದು ಪ್ರತಿಭಟನಾ ನಿರತ ಗುತ್ತಿಗೆದಾರರು ಎಚ್ಚರಿಕೆ ನೀಡಿದರು.

ಗುತ್ತಿಗೆದಾರರನ್ನು ನಂಬಿಕೊಂಡು ಸಾವಿರಾರು ಕೂಲಿ ಕಾರ್ಮಿಕರು, ಸಾಮಗ್ರಿಗಳ ಮಾರಾಟಗಾರರು ಇದ್ದು, ಹಣ ಬಿಡುಗಡೆಯಾಗದೆ ಇರುವುದರಿಂದ ಅವರೆಲ್ಲ ಬೀದಿಗೆ ಬಂದಿದ್ದಾರೆ ಎಂದು ಸಂಘದ ಅಧ್ಯಕ್ಷ ಮಂಜುನಾಥ್ ಹೇಳಿದರು.

ನಮ್ಮ ಹಣದ ಮೇಲೆ ಅಧಿಕಾರಿಗಳು ಸವಾರಿ ಮಾಡುತ್ತಿದ್ದಾರೆ. ಎರಡು ವರ್ಷಗಳಿಂದಲೂ ಒಂದೂ ಬಿಲ್ ನೀಡಿಲ್ಲ, ನಾವೆಲ್ಲ ಬೀದಿಗೆ ಬರುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೊರೊನಾ ಸಂದರ್ಭದಲ್ಲೂ ಅಧಿಕಾರಿಗಳ ಭ್ರಷ್ಟಾಚಾರ ಮಿತಿಮೀರಿದೆ. ಕಾಮಗಾರಿ ನಂಬಿಕೊಂಡು ಎರಡು ಸಾವಿರಕ್ಕೂ ಹೆಚ್ಚು ಗುತ್ತಿಗೆದಾರರಿದ್ದೇವೆ. ಬೇಡಿಕೆಗೆ ಸ್ಪಂದಿಸದಿದ್ದರೆ ವಾಹನ ತಡೆದು ಪ್ರತಿಭಟನೆ ಮಾಡುತ್ತೇವೆ. ಪ್ರತಿ ಬಾರಿ ದಸರಾ ಹಬ್ಬಕ್ಕೆ ಬಿಲ್ ಬಿಡುಗಡೆಯಾಗುತ್ತಿತ್ತು. ಇತಿಹಾಸದಲ್ಲಿ ಇದೇ ಮೊದಲ ಬಾರಿ ಬಿಡಿಗಾಸನ್ನೂ ಕೊಟ್ಟಿಲ್ಲ. ಅತಿ ಹೆಚ್ಚು ಬಿಲ್ ಆಗಿರುವ ಕಾಮಗಾರಿಗೆ ಲಂಚ ಪಡೆದು ಹಣ ನೀಡಿ ಸೀನಿಯಾರಿಟಿ ಬಿಲ್ ನೀಡುವ ನಿಯಮಾವಳಿಗಳನ್ನು ಅಧಿಕಾರಿಗಳು ಸ್ಪಷ್ಟವಾಗಿ ಉಲ್ಲಂಘನೆ ಮಾಡಿದ್ದಾರೆ. ಯಾರೂ ಹೇಳುವವರು, ಕೇಳುವವರು ಇಲ್ಲದಂತಾಗಿದೆ ಎಂದು ಆರೋಪಿಸಿದರು.